ಥಾಣೆ ಬಂಟ್ಸ್ ಎಸೋಸಿಯೇಶನ್‌ನ

# ಸ್ನೇಹ ಸೌರಭ

101, Jai Shankar CHS Ltd., Opp. Axis Bank, LBS Marg, Hari Niwas, Thane (W) - 400602.
Tel. 7506371586 • e-mail : thanebunts@gmail.com • Website : thanebunts.org

ಜನವರಿ - ಮಾರ್ಚ್ 2025 | SNEHA SAURABHA | JANUARY-MARCH 2025






# AMRUTHESHWARA ENGLISH MEDIUM HIGH SCHOOL


Vamanjoor, Mangaluru, D.K. - 575028.

ISO Certified School




## Janu Shetty Memorial Educational and Charitable Trust (R.)

*Imparting Holistic Education Since 1999*



"ಧೈರ್ಯದಿಂದ
ಸತ್ಯವನ್ನು ಎದುರಿಸು,
ಜಯ ಎಂಬುದು
ಕಟ್ಟಿಟ್ಟ ಬುತ್ತಿ"
– ಸ್ವಾಮಿ ವಿವೇಕಾನಂದ


# ಸ್ನೇಹ ಸೌರಭ
# SNEHA SAURABHA

## ಥಾಣೆ ಬಂಟ್ಸ್ ಎಸೋಸಿಯೇಶನ್


101, ಜೈಶಂಕರ್ ಕೋ. ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.
ಆಕ್ಸಿಸ್ ಬ್ಯಾಂಕಿನ ಎದುರು, ಎಲ್.ಬಿ.ಎಸ್. ಮಾರ್ಗ, ಹರಿನಿವಾಸ,
ಥಾಣೆ (ಪ) - 400 602 • ಮೊಬೈಲ್ : 91525 35242
e-mail : thanebunts@gmail.com / web : www.thanebunts.org



**ಸಂಪುಟ–17** | **ಜನವರಿ – ಮಾರ್ಚ್ 2025** | **ಸಂಚಿಕೆ–01**



**ಕಾರ್ಯಾಧ್ಯಕ್ಷರು**
ಸುರೇಶ್ ಶೆಟ್ಟಿ, ಕಡಂದಲೆ
**ಪ್ರಧಾನ ಸಂಪಾದಕರು**
ಡಾ. ಕರುಣಾಕರ್ ಶೆಟ್ಟಿ
**ಉಪ ಸಂಪಾದಕರು**
ಶ್ರೀಮತಿ ಪ್ರಮೋದ ಮಾಡ
**ಸಂಪಾದಕ ಮಂಡಳಿ**
ಭಾಸ್ಕರ ಎನ್. ಶೆಟ್ಟಿ
ಜ್ಯೋತಿ ಎನ್. ಶೆಟ್ಟಿ
**ಗೌರವ ಸಲಹೆಗಾರರು**
ಡಿ. ಜಿ. ಬೋಳಾರ್
ಭಾಸ್ಕರ ಎಂ. ಶೆಟ್ಟಿ
ಕೇಶವ ಎಂ. ಆಳ್ವ
ಎನ್. ಶೇಖರ ಶೆಟ್ಟಿ
ರವೀಂದ್ರ ಎಂ. ಶೆಟ್ಟಿ
**ಸಲಹೆ ಸಮಿತಿ**
ಸಿಎ ಕರುಣಾಕರ್ ಶೆಟ್ಟಿ
ಸಿಎ ಜಗದೀಶ್ ಶೆಟ್ಟಿ
ಚಂದ್ರಹಾಸ ಎಸ್. ಶೆಟ್ಟಿ
ಕುಶಲ ಸಿ. ಭಂಡಾರಿ
ವೇಣುಗೋಪಾಲ ಎಲ್. ಶೆಟ್ಟಿ
ಸುನಿಲ್ ಜೆ. ಶೆಟ್ಟಿ
ಅಶೋಕ್ ಎಂ. ಶೆಟ್ಟಿ


**ಪ್ರಕಾಶಕರು**
ಜಗದೀಶ ಶೆಟ್ಟಿ, ಕನಕ
**ಥಾಣೆ ಬಂಟ್ಸ್ ಎಸೋಸಿಯೇಶನ್**
101, ಜೈಶಂಕರ್ ಕೋ.ಆಪ್.ಹೌಸಿಂಗ್
ಸೊಸೈಟಿ ಲಿ., ಆಕ್ಸಿಸ್ ಬ್ಯಾಂಕಿನ ಎದುರು,
ಎಲ್. ಬಿ. ಎಸ್. ಮಾರ್ಗ,
ಹರಿ ನಿವಾಸ, ಥಾಣೆ (ಪ) - 400 602.
ದೂರವಾಣಿ : 022 - 6561 6162
e-mail : thanebunts@gmail.com
web : www.thanebunts.org


## ಸ್ನೇಹ ಸಿಂಚನ :


1. ಸಂಪಾದಕರ ನುಡಿ
2. ಗೌ. ಪ್ರಧಾನ ಕಾರ್ಯದರ್ಶಿ ಮಾತು
3. ಹೆಮ್ಮೆಯ ಕರುನಾಡು (ಕವನ)
4. ಕನಕದಾಸರ ಜೀವನ ಸಾಧನೆ
5. ಇವರು ನಮ್ಮವರು
6. ಓ ಮನಸ್ಸೇ (ಕವನ)
7. ಸ್ವಾಮಿ ವಿವೇಕಾನಂದ
8. ಮೂರ್ಖ ಶಿಷ್ಯರು (ಕವನ)
9. ಭಾರತದ ಅನರ್ಘ್ಯರತ್ನ ವಿವೇಕಾನಂದ
10. ಗಝಲ್ (ಕವನ)
11. ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿದ ಹುಡುಗ ಈಗ
    ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ
12. ಇಟ್ಟಂಗೆ ಇರಬೇಕು (ಕವನ)
13. ಕೊಟ್ಟವ ಕೋಡಂಗಿ ಇಸ್ಕೊಂಡವ ಈರಭದ್ರ
14. ಭಾರತೀಯ ಚಿತ್ರರಂಗದ ಮೊದಲ ರಾಣಿ
15. ಸ್ತ್ರೀ (ಕವನ)


○○○

## ಮುಖ ಪುಟ

**ಎಸೋಸಿಯೇಶನಿನ 20ನೆಯ ವಾರ್ಷಿಕೋತ್ಸವವನ್ನು ಗಣ್ಯರು ದೀಪ ಪ್ರಜ್ವಲಿಸಿ ಉದ್ಘಾಟಿಸುತ್ತಿರುವುದು.**


(ಸ್ನೇಹ ಸೌರಭ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನದ ಅಭಿಪ್ರಾಯಗಳು ಆಯಾಯ ಲೇಖಕರಿಗೆ ಸಂಬಂಧಪಟ್ಟಿದ್ದು. ಪತ್ರಿಕೆ ಯಾವುದೇ ಜವಾಬ್ದಾರಿಗೆ ಹೊಣೆಯಲ್ಲ.)

**ಸಂಪಾದಕರ ನುಡಿ**

# ನಮ್ಮ ಸಮಾಜದಲ್ಲಿ ವಿಧವೆ

ಹೆಣ್ಣು ಪೂಜಿಸಲ್ಪಡುವಲ್ಲಿ ದೇವರು ನೆಲೆಸುತ್ತಾನೆ ಎಂದು ನಂಬಿಕೊಂಡು ಬಂದ ನಮ್ಮ ಮಹಾನ್ ಭಾರತ ದೇಶದಲ್ಲಿ ಅದೇ ಹೆಣ್ಣು ವಿಧವೆಯಾದಲ್ಲಿ ಆಕೆ ಪಡುವ ಪಾಡು, ಅವಳ ಮೇಲಾಗುವ ದೌರ್ಜನ್ಯ, ಅನ್ಯಾಯ ಮತ್ತು ಶೋಷಣೆ ಅವರ್ಣನೀಯ. ಅವಳೂ ಓರ್ವ ಮಾನವ ಜೀವಿ. ಅವಳಿಗೂ ನಮ್ಮಂತೆ ಬದುಕಿ ಬಾಳುವ ಹಕ್ಕಿದೆ ಎಂಬುದನ್ನು ಮರೆತು ಅವಳು ಇತರರಂತೆ ಬಾಳುವುದಕ್ಕೆ ಅವಕಾಶ ಮಾಡಿ ಕೊಡುವುದರಲ್ಲಿ ನಾವೆಲ್ಲೋ ಎಡವಿ ಬಿದ್ದಿದ್ದೇವೆ. ಪತ್ನಿ ತೀರಿಕೊಂಡ ಕೂಡಲೇ ಆ ಪತಿಯಾದವನಿಗೆ ಮರುವಿವಾಹ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡುವ ನಮ್ಮ ಸಮಾಜ ಪತಿ ತೀರಿಕೊಂಡ ಆ ಕ್ಷಣದಲ್ಲಿ ಅವಳ ಮೇಲೆ ಹೇರುವ ಬಂಧನಗಳು ನೂರಾರು. ಈ ಲಕ್ಷ್ಮಣ ರೇಖೆಗಳಿಂದ ದೇವರಿಗೂ ಆಕೆಯನ್ನು ಪಾರು ಮಾಡುವುದು ಕಷ್ಟ ಸಾಧ್ಯ. ಅವಳು ಹಣೆಗೆ ಕುಂಕುಮ ಇಡುವಂತಿಲ್ಲ. ಕೈಗಳಿಗೆ ಬಳೆ ತೊಡುವಂತಿಲ್ಲ. ಆಭರಣ ಧರಿಸುವಂತಿಲ್ಲ, ಹೂವು ಮುಡಿಯುವಂತಿಲ್ಲ, ಮಂಗಳ ಕಾರ್ಯಕ್ರಮದಲ್ಲಿ ಭಾಗವಹಿಸುವಂತಿಲ್ಲ. ಬಣ್ಣಬಣ್ಣದ ಬಟ್ಟೆ ಧರಿಸುವಂತಿಲ್ಲ ಇತ್ಯಾದಿ. ಕೈ ಹಿಡಿದ ಪತ್ನಿ ತೀರಿಕೊಂಡ ಕೂಡಲೇ ಆಕೆಯ ಪತಿಯನ್ನು ನವಜೀವನದ ಹೊಸ್ತಿಲಿಗೆ ಕರೆದು ಸ್ವಾಗತ ನೀಡುವ ಸಮಾಜ ಆ ಹೆಣ್ಣಿಗೇಕೆ ಮಣೆಯನ್ನು ಹಾಕಿ ಸ್ವಾಗತ ನೀಡುವುದಿಲ್ಲ. ಆ ಗಂಡನ್ನು ಸೃಷ್ಟಿ ಮಾಡಿದಾತನೆ ಆ ಹೆಣ್ಣನ್ನು ಕೂಡಾ ಸೃಷ್ಟಿ ಮಾಡಿರೋದು! ಮತ್ತೇಕೆ ಈ ತಾರತಮ್ಯ ಈ ಭೇದ ಭಾವ?

ಹೆಣ್ಣಿಗಾಗುವ ಅನ್ಯಾಯವನ್ನು ಸಮಾಜ ಸುಧಾರಕರಾದ ವಿಲಿಯಂ ಬೆಂಟಿಕ್, ದಯಾನಂದ ಸರಸ್ವತಿ, ರಾಜಾರಾಮ್ ಮೋಹನ್ ರೋಯ್, ಮಹಾತ್ಮ ಗಾಂಧಿಯವರಂತವರ ಸತತ ಪ್ರಯತ್ನಗಳಿಂದ ಬಹಳಷ್ಟು ಸುಧಾರಣೆ ಕಂಡರೂ ಸಂಪೂರ್ಣ ನಿಲ್ಲಿಸಲು ಸಾಧ್ಯವಾಗಿಲ್ಲ ಅನ್ನೋದು ಬೇರೆ ವಿಷಯ. ಹೆಣ್ಣಿಗೆ ಚಿತ್ರಹಿಂಸೆ ನೀಡಿ ಕೊಲ್ಲುವ ನರಾಧಮರ ಸಂಖ್ಯೆ ಇನ್ನೂ ನಮ್ಮ ಸಮಾಜದಲ್ಲಿ ಕಡಿಮೆ ಇಲ್ಲ.

ಕೆಲವು ದಿನಗಳ ಹಿಂದೆ ನಮ್ಮ ಸಂಬಂಧಿಕರೊಬ್ಬರ ಸಾವಿನ ಸುದ್ದಿ ತಿಳಿದಾಗ ಅಲ್ಲಿಗೆ ಧಾವಿಸಿದ್ದೆ. ಬಹಳಷ್ಟು ಹಿರಿಯರು, ಕಿರಿಯರು ಅಲ್ಲಿ ನೆರೆದಿದ್ದು ನಾನೂ ಅವರಲ್ಲೊಬ್ಬ ಮೂಕ ಪ್ರೇಕ್ಷಕನಾದೆ. ಮೃತರು ಬಹಳಷ್ಟು ದಿನ ಅಸೌಖ್ಯದಿಂದ ನರಳಿದ್ದು ಅವರ ಪತ್ನಿ ಅವರ ಸೇವೆಯನ್ನು ನಿಷ್ಠೆಯಿಂದ ಮಾಡಿದ್ದರು. ಆಗ ಅಲ್ಲಿಗೆ ಸಮಾಜ ಸೇವಕನೆಂಬಂತೆ ಮಹಾನುಭಾವರೊಬ್ಬರು ಬಂದು ಹೆಣವನ್ನು ಮೀಯಿಸಿ ಮಲಗಿಸಿದ ನಂತರ ಮೃತರ ಪತ್ನಿ ಹಾಗೂ ಮಕ್ಕಳನ್ನು ಅಲ್ಲಿಗೆ ಕರೆಸಿದ. ಅವರೆಲ್ಲರೂ ಒಂದೆಡೆ ಸೇರಿದ ನಂತರ ಮೃತರ ಪತ್ನಿಯ ಒಂದೊಂದೇ ಆಭರಣಗಳನ್ನು ಕಳಚಿಸಿ ಆ ಹೆಣದ ಎದೆಯ ಮೇಲೆ ಇರಿಸಲು ಹೇಳಿದ. ಆ ತಾಯಿ ಮಣ್ಣಿನ ಬಳೆ ಧರಿಸಿರದ ಕಾರಣ ಆಕೆಯ ಕೈಗೆ ಮಣ್ಣಿನ ಬಳೆ ತೊಡಿಸಲು ಹೇಳಿ ನಂತರ ಅದನ್ನು ಒಡೆಸಿದರು. ಆ ತಾಯಿಯ ಹಣೆಯ ಕುಂಕುಮ ಒರೆಸಿದಾಗ ಆ ಹೆಣ್ಣಿನ ಗೋಳು ನನ್ನಿಂದ ನೋಡಲಾಗಲಿಲ್ಲ. ನಾಲ್ಕು ಜನ ಹಿರಿಯರು ಕೂಡಿದ ಕಡೆಯಲ್ಲಿ ಇದನ್ನು ಪ್ರತಿಭಟಿಸುವ ಎದೆಗಾರಿಕೆ ಅಲ್ಲಿ ನೆರೆದವರಲ್ಲಿ ಯಾರಲ್ಲೂ ಇರಲಿಲ್ಲ.



ಅಲ್ಲಿ ಮುಂದೆ ನಡೆದ ಘಟನೆಯಂತೂ ಇನ್ನೂ ಅಮಾನವೀಯವಾದುದು. ಮನುಷ್ಯರಾದವರು ನೋಡಲಾಗದ್ದು. ಅಲ್ಲಿ ಅಂದು ತೀರಿಕೊಂಡವರು ಬಹಳಷ್ಟು ದಿನ ರೋಗದಿಂದ ನರಳಿದ್ದ ವಿಷಯ ಎಲ್ಲರಿಗೂ ತಿಳಿದ ವಿಚಾರ. ಆದರೂ ಆ ವ್ಯಕ್ತಿ ಮೃತರ ಪಾದವನ್ನು ಅವರ ಪತ್ನಿಯ ಕೈಯಿಂದ ತೊಳೆಸಿ ಅವರಿಗೂ ಅವರ ಮಕ್ಕಳಿಗೂ ಕುಡಿಯಲು ಆದೇಶ ನೀಡಿದ. ಬಾಳಿಡಿ ತಮ್ಮ ಪತಿಯ ಕಷ್ಟ ಸುಖಗಳಲ್ಲಿ ಸಮಭಾಗಿಯಾಗಿ, ಆತ ಅಸೌಖ್ಯದಿಂದ ನರಳಿದಾಗ ದಿನ ರಾತ್ರಿ ಅವರ ಪತ್ನಿಗೆ ದೊರೆತ ಉಡುಗೊರೆ ಮೃತರ ಪಾದ ತೊಳೆದ ಆ ನೀರು.. ಜೊತೆಗೆ ಆ ಮಕ್ಕಳಿಗೂ.

ಈ ನಾಟಕವನ್ನು ಆಸಕ್ತಿಯಿಂದ ನೋಡುತ್ತಿದ್ದ ಎಲ್ಲರನ್ನು ನಾನೂ ಅನುಸರಿಸಿದೆ. ಬೇರೆ ಉಪಾಯ ಕಂಡು ಬರಲಿಲ್ಲ. ಹೆಣ್ಣು ಮದುವೆ ದಿನ ತನ್ನ ಹೊಸ ಬಾಳಿಗಡಿ ಇಡುವಾಗ ಗಂಡಿನ ಹೆಸರಲ್ಲಿ ತೊಡುವುದು ಮಾಂಗಲ್ಯ ಸರ, ಕಾಲುಂಗುರ ಮತ್ತು ಒಡ್ಡಿಯುಂಗುರ (ಮದುವೆ ಹೆಣ್ಣು ಧರಿಸುವ ವಿಶಿಷ್ಟ ಕೈ ಉಂಗುರ) ಪತಿ ತೀರಿಕೊಂಡಾಗ ಅವಳು ಇಚ್ಛಿಸಿದಲ್ಲಿ ಆ ಆಭರಣಗಳನ್ನು ತೆಗೆಯಲಿ, ಆದರೆ ಅವಳು ವಿವಾಹ ಪೂರ್ವದಲ್ಲಿ ಧರಿಸುತಿದ್ದ ಕುಂಕುಮ, ಬೆಂಡೋಲೆ, ಬಳೆ, ಹೂವು ಇವುಗಳನ್ನೇಕೆ ವಿಸರ್ಜನೆ ಮಾಡಬೇಕು? ಇದು

ಯಾರು ಮಾಡಿದ ನಿಯಮ? ಈ ನಿಯಮ ಗಂಡಿಗೇಕೆ ಅನ್ವಯ ಆಗುವುದಿಲ್ಲ, ಮುಂದುವರಿದಿರುವ ಯುಗದಲ್ಲಿ ಬದುಕುತ್ತಿರುವ ನಾವು ಈ ಅರ್ಥಹೀನ ಕ್ರಮವನ್ನು ಮುಂದುವರಿಸುವುದು ಎಷ್ಟರಮಟ್ಟಿಗೆ ಸರಿ? ಇದು ಇನ್ನಾದರೂ ನಿಲ್ಲಲೇಬೇಕು. ಹೆಣ್ಣು ಮದುವೆಯ ನಂತರ ಅವಳ ಗಂಡನ ಹೆಸರಲ್ಲಿ ತೊಡುವುದು ಮಾಂಗಲ್ಯಸರ ಕಾಲುಂಗುರ ಮತ್ತು ಒಡ್ಡಿಯುಂಗುರ (ಕೆಲವೆಡೆ ವಿವಾಹಿತ ಹೆಣ್ಣು ಧರಿಸುವ ಒಂದು ವಿಶಿಷ್ಟ ರೀತಿಯ ಉಂಗುರ).

ಪತಿ ತೀರಿಕೊಂಡಾಗ ಆಕೆ ಇಚ್ಛಿಸಿದಲ್ಲಿ ಅವುಗಳನ್ನು ಬೇಕಾದರೆ ತೆಗೆಯಲಿ, ಆದರೆ ಆಕೆ ವಿವಾಹ ಪೂರ್ವದಲ್ಲಿ ಧರಿಸುತ್ತಿದ್ದ ಕುಂಕುಮ, ಕಿವಿಯೋಲೆ, ಮೂಗಿನ ನತ್ತು ಮತ್ತು ಹೂವು ಧರಿಸುವುದನ್ನು ಯಾಕೆ ಬಿಡಬೇಕು? ಇದು ಯಾರು ಮಾಡಿದ ನಿಯಮ? ಇದು ವಿಧುರ ಪತಿಗೇಕೆ ಅನ್ವಯ ವಾಗುವುದಿಲ್ಲ? ಈ ಮುಂದುವರಿದ ಕಾಲ ಘಟ್ಟದಲ್ಲಿ ಬದುಕುವ ನಾವು ಈ ಅರ್ಥಹೀನ ಕ್ರಮಗಳನ್ನು ಇನ್ನೂ ಅನುಸರಿಸುವುದು ಎಷ್ಟು ಸರಿ? ಇದು ಇನ್ನಾದರೂ ನಿಲ್ಲಬೇಕು. ಪತಿಯನ್ನು ಕಳೆದುಕೊಂಡು ದಿಕ್ಕು ಕಾಣದೆ ತಡವರಿಸುತ್ತಿರುವ ಅಸಹಾಯಕ ಹೆಣ್ಣಿಗೆ ಸಾಂತ್ವನ ನೀಡಿ ಅವಳು ಮುಂದೆ ಬದುಕು ಸಾಗಿಸಲು ಸ್ಥೈರ್ಯ ನೀಡಬೇಕಾದ ನಾವೇ ಅವಳನ್ನು ಮತ್ತೂ ಪಾಪದ ಕೂಪಕ್ಕೆ ತಳ್ಳಿದರೆ ನಾವು ಮನುಷ್ಯರೆಂದು ಕರೆಸಿಕೊಳ್ಳಲು ಅರ್ಹರೇ? ಕೆಲವು ವಿಷಯಗಳಲ್ಲಿ ವಿಧವೆಯ ಪಾಡು ನಾಯಿ ಪಾಡು. ಆಕೆ ಶುಭ ಸಮಾರಂಭದಲ್ಲಿ ಭಾಗವಹಿಸುವಂತಿಲ್ಲ. ಬೆಳಗಾತ ಯಾರಿಗೂ ಮುಖ ತೋರಿಸುವಂತಿಲ್ಲ.

ಆದರೆ ಪತ್ನಿ ತೀರಿಕೊಂಡರೆ ಪತಿಯಾದವನ ಮುಖಕ್ಕೆ ಆ ಅಮಂಗಳ ತಟ್ಟುವುದಿಲ್ಲ. ವಿಧವೆ ತಾಯಿ ಬಹಳಷ್ಟು ಕಷ್ಟಪಟ್ಟು ಮಗಳ ಮದುವೆಗೆ ಹಣ ಹೊಂದಿಸಿದರೂ ಆಕೆ ಧಾರೆ ಎರೆಯುದಂತೂ ದೂರದ ಮಾತು. ಆಕೆ ಧಾರೆ ಕಾರ್ಯಕ್ರಮವನ್ನೂ ನೋಡುವಂತಿಲ್ಲ. ಎಂತಹ ವಿಪರ್ಯಾಸ. ತಾನು ಜನ್ಮ ನೀಡಿ ಬೆಳೆಸಿದ ಮಗಳ ಬದುಕಿನ ಸುಂದರ ಕ್ಷಣಗಳು ಆ ತಾಯಿಗೆ ನಿಷಿದ್ಧ. ನಮ್ಮ ಸಮಾಜ ಅಮಾಯಕ ಹೆಣ್ಣಿಗೆ ನೀಡುವ ಸ್ಥಾನಮಾನ ಅದೆಷ್ಟು ಭಯಂಕರ!! ಅದರಲ್ಲೂ ನಮ್ಮ ಹಳ್ಳಿಗಳಲ್ಲಿ ವಿಧವೆಯರ ದುರವಸ್ಥೆ ನೋಡುವಾಗ ಒಮ್ಮೊಮ್ಮೆ ಅಂದು ಪ್ರಚಲಿತವಿದ್ದ ಸತಿ ಸಹಗಮನ ಪದ್ಧತಿಯೇ ಒಳ್ಳೆದಿತ್ತು ಎಂದೆನಿಸುತ್ತದೆ. ಹೆಜ್ಜೆ ಹೆಜ್ಜೆಗೂ ಅಪಮಾನ ಚಿತ್ರಹಿಂಸೆಗೊಳಗಾಗಿ ಇಂಚು ಇಂಚು ಸಾಯೋದಕ್ಕಿಂತ ಒಮ್ಮೆಲೇ ಜೀವಂತ ದಹಿಸಿಕೊಂಡು ಒಮ್ಮೆಲೇ ನೋವು ಉಣ್ಣುವುದೇ ಲೇಸು. ನಮ್ಮ ದೃಷ್ಟಿಕೋನ ಬದಲಾದರೆ ಮಾತ್ರ ಈ ಅಮಾಯಕ ಹೆಣ್ಣು ನಿರಾಳವಾಗಿ ಬದುಕುವ ಅವಕಾಶ ಪಡೆಯ ಬಹುದು. ಸರಕಾರ ವಿಧವೆಯರ ಸುಧಾರಣೆಗಾಗಿ ಡೆಲ್ಲಿಯಲ್ಲಿ ಮಾಡಿದ ಕಾನೂನು ಹಳ್ಳಿಗೆ ತಲುಪುವುದೇ ಇಲ್ಲ. ಪೇಟೆಯಲ್ಲಿ ಪತಿ ತೀರಿಕೊಂಡರೆ ಆತನ ಉದ್ಯೋಗ ಆಕೆಗೆ ದೊರಕುವ ಚಾನ್ಸ್ ಇದ್ದರೂ, ಹಳ್ಳಿಯಲ್ಲಿ ಮಾತ್ರ ಆಕೆಗೆ ಪಾಲನ್ನೂ ಕೊಡದೆ ಆಕೆಯನ್ನು ಜೀತದಾಳಿನಂತೆ ಕಂಡು ಅಡಿಗಡಿಗೂ ಶೋಷಣೆಯನ್ನು ಮಾಡುತ್ತಾರೆ. ಆಕೆಗೆ ಮಕ್ಕಳು ಇದ್ದರೆ ಅವುಗಳದ್ದು ಕೂಡಾ ನಾಯಿ ಪಾಡೇ. ಕಾನೂನು ಗೊತ್ತಿರದ ಆಕೆ ಇದು ತನ್ನ ಪೂರ್ವಜನ್ಮದ ಕರ್ಮವೆಂದು ನೋವನ್ನು ನುಂಗಿ ನರಕದ ಬದುಕು ಸಾಗಿಸುವ ಈ ಸಾವಿರಾರು ಅಭಾಗಿನಿಯರ ಕಷ್ಟ ಕೋಟಲೆಗಳಿಗೆ ಮುಕ್ತಿ ಕೊಡುವವರು? ವಿಧವೆಯರೂ ನಮ್ಮ ಹಾಗೆ ಮನುಷ್ಯರೇ. ಅವರಲ್ಲೂ ಭಾವನೆಗಳಿರುತ್ತವೆ. ನೋವು ನಲಿವುಗಳು, ತವಕ ತಲ್ಲಣಗಳು ಇರುತ್ತವೆ ಎಂಬುದನ್ನು ತಿಳಿದು ನಾವು ಅವರಿಗೆ ಬದುಕಲು ಅವಕಾಶ ಮಾಡಿ ಕೊಡಬೇಕಾಗಿದೆ.

ಪತ್ನಿ ತೀರಿಕೊಂಡ ತಕ್ಷಣ ಗಂಡಿಗೆ ಹೆಣ್ಣು ಕೊಡಲು ಮುಂದೆ ಬರುವವರು ಪತಿ ತೀರಿಕೊಂಡ ಹೆಣ್ಣಿಗೂ ನೀಡ ಬೇಕಾಗಿದೆ. ವಿಧವೆಗೆ ಮರು ಬಾಳು ಕೊಡುವ ಮಹನೀಯರು ಮುಂದೆ ಬರಬೇಕಾಗಿದೆ. ಏನೇ ಆಗಲಿ ಆಕೆಯೂ ನಮ್ಮಂತೆ ಮನುಷ್ಯಳು ಆಕೆಗೂ ನಮ್ಮ ನಿಮ್ಮಂತೆ ಬದುಕುವ ಹಕ್ಕಿದೆ ಎಂದು ತಿಳಿಯುವ ಅವಶ್ಯಕತೆ ಇದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ, ಶುಭ ಸಮಾರಂಭಗಳಲ್ಲಿ ವಿಧವೆಗೆ ಅವಕಾಶ ನೀಡಬೇಕು. ವಿಧವೆ ಎದುರಿಗೆ ಬಂದರೆ ಚಿಕ್ಕ ಮಕ್ಕಳನ್ನು ಅವರ ದೃಷ್ಟಿಗೆ ಬೀಳದಂತೆ ಒಳಗೆ ಕರೆದು ಕರೆದುಕೊಂಡು ಹೋಗಬಾರದು. ಹೆಣ್ಣಿನ ಹಲವು ಮುಖಗಳನ್ನು ಸ್ವಾಗತ ಕೋರುವ ನಾವು ವಿಧವೆಗೂ ಮಣೆ ಹಾಕುವ.. ಈ ನಿಟ್ಟಿನಲ್ಲಿ ಗಂಡಿನಂತೆ ಹೆಣ್ಣಿನ ಸಹಕಾರವೂ ಅತ್ಯಗತ್ಯ. ಹೆಣ್ಣಿಗೆ ಹೆಣ್ಣು ಶತ್ರುವಾಗದೆ ಗೆಳತಿಯಾಗಿ, ಸಖಿಯಾಗಿ ಅರಿತು ನಡೆದಲ್ಲಿ ಆ ದುರ್ದೈವಿಯ ಮೊಗದಲ್ಲಿ ತುಸು ನಗು ಮೂಡಬಹುದು.

ಈಗ ಸಮಾಜ ಸಾಕಷ್ಟು ಸುಧಾರಣೆಗೊಂಡಿದೆ. ನಾವೂ ಈ ನಿಟ್ಟಿನಲ್ಲಿ ನಮ್ಮಿಂದ ಆದಷ್ಟು ಸಹಕಾರ ನೀಡೋಣ. ಎಲ್ಲರಿಗೂ ಒಳಿತಾಗಲಿ. 'ಸರ್ವೇ ಜನಾಃ ಸುಖಿನೋ ಭವಂತು'.

**– ಡಾ. ಕರುಣಾಕರ್ ಎನ್. ಶೆಟ್ಟಿ,**
**ಪಣಿಯೂರು**

# ಗೌ. ಪ್ರಧಾನ ಕಾರ್ಯದರ್ಶಿ ಮಾತು

## ಭೂಮಿಯಲ್ಲಿ ಕಾಣಸಿಗುವ ಪ್ರತ್ಯಕ್ಷ ದೇವರು = ತಾಯಿ

ಪ್ರಪಂಚದ ಪ್ರತಿಯೊಂದು ಧರ್ಮದಲ್ಲೂ ತಾಯಿಗೆ ಮಹತ್ವದ ಸ್ಥಾನವನ್ನು ನೀಡಿ ಗೌರವ ನೀಡಲಾಗಿದೆ. ಹೆಚ್ಚೇಕೆ ಪಶು ಪಕ್ಷಿಗಳಲ್ಲೂ ತಾಯಿಯಾದವಳಿಗೆ ತನ್ನದೇ ಆದ ವಿಶಿಷ್ಟ ಜವಾಬ್ದಾರಿಗಳಿರುತ್ತವೆ. ಮಾನವ ಸಂತತಿ ಅಥವಾ ಜೀವ ಸಂಕುಲ ಇಂದಿನವರೆಗೂ ಉಳಿದುಕೊಂಡು ಬರುವುದರಲ್ಲಿ ತಾಯಿಯದು ಸಿಂಹ ಪಾಲು ಎನ್ನುವುದರಲ್ಲಿ ಅತಿಶಯೋಕ್ತಿಯ ಮಾತಿರಲಾರದು. ಪುರಾಣ ಕಾಲದಿಂದಲೂ ತಾಯಿಗೆ ಗೌರವದ ಸ್ಥಾನ ಕೊಡಲಾಗಿದೆ.

ರಾಮಾಯಣ, ಮಹಾಭಾರತ ಹಾಗೂ ಕ್ರಿಶ್ಚಿಯನ್ ಎಲ್ಲಾ ಕಾಲದಲ್ಲೂ ತಾಯಿ ಪೂಜ್ಯಳಾಗಿ ಬೆಳೆದು ಬಂದಿದ್ದಾಳೆ. ರಾಮಾಯಣದ ಕೌಶಲ್ಯ, ಮಹಾಭಾರತದ ಕುಂತಿ, ಕ್ರಿಶ್ಚಿಯನ್ ಧರ್ಮದ ಮೇರಿ ಈ ಮಾತೆಗೆ ಸಾಕ್ಷಿಯಾಗಿ ನಿಲ್ಲುತ್ತಾರೆ. ವೇದಕಾಲದಿಂದಲೂ ಅಥವಾ ಮಾನವ ಈ ಭೂಮಿಯಲ್ಲಿ ಹುಟ್ಟು ಪಡೆದ ಆ ದಿನದಿಂದಲೂ ತಾಯಿ ದೇವರ ಸ್ಥಾನವನ್ನು ಪಡೆದುಕೊಂಡಿದ್ದಾಳೆ.

'ತಾಯಿ ದೇವರೆಂದು ವೇದ ಬಾಯಿ ಬಿಟ್ಟು
ಹೇಳುತಿಹುದು
ತಾಯಿ ದೇವರೆಂದು ತಿಳಿದವರೆಲ್ಲರೊರೆವರು

ಕವಿ ಪೋಣಿಸಿದ ಈ ಸಾಲುಗಳಲ್ಲಿ ತಾಯಿಯನ್ನು ದೇವರೆಂದು ವೇದಗಳು ಮತ್ತು ಜ್ಞಾನಿಗಳು ಹೇಳುತ್ತಾ ಬಂದಿದ್ದಾರೆಂದು ವರ್ಣಿಸಲಾಗಿದೆ. ತಾಯಿ ಮತ್ತು ಹೆಣ್ಣಿಗೆ ವೇದ ಕಾಲದಿಂದಲೂ ಮಹತ್ವದ ಸ್ಥಾನ ನೀಡಲಾಗಿದೆ. ಮೈತ್ರೇಯಿ, ಗಾರ್ಗಿ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತಾರೆ. ಮಹಾಸತಿ ಅನಸೂಯೆಯಂತೂ ತನ್ನ ಪತಿವ್ರತ ಶಕ್ತಿಯಿಂದ ತನ್ನನ್ನು ಪರೀಕ್ಷೆ ಮಾಡಲು ಬಂದ ತ್ರಿಮೂರ್ತಿಗಳನ್ನು ಚಿಕ್ಕ ಮಕ್ಕಳನ್ನಾಗಿಸಿ ಮೊಲೆಯೂಡಿಸಿದ ಮಹಾ ಮಾತೆ ಈಕೆ.

ಮನೆಯೇ ಮೊದಲ
ಪಾಠ ಶಾಲೆ
ಜನನಿ ತಾನೆ
ಮೊದಲ ಗುರುವು
ಜನನಿಯಿಂದ ಪಾಠ
ಕಲಿತ ಜನರು ಧನ್ಯರು



ಈ ಕವಿವಾಣಿಯನ್ನು ಗಮನಿಸಿದರೆ ಮಗು ತನ್ನ ಮೂಲ ಶಿಕ್ಷಣದ ಭದ್ರ ತಲಪಾಯವನ್ನು ಪಡೆಯುತ್ತದೆ. ಕಲಿಯದ ಓದದ ಬಾಯಿಯನ್ನು ಬಿಲದ ಬಾಯಿ ಎಂದು ತಿಳಿಹೇಳಿ ಬಿಲದೊಳಗೆ ವಿಷ ಸರ್ಪಗಳು ನುಸುಳುವಂತೆ ಓದದ ತಲೆಗೆ ವಿಷಮಯ ವಿಷಯಗಳು ಹೊಕ್ಕುತ್ತವೆ ಎಂದು ತಿಳಿದವರು ಹೇಳುತ್ತಾರೆ.

ವಿದ್ಯೆಯುಳ್ಳವನ ಮುಖವು ಮುದ್ದು
ಬರುವಂತಿಕ್ಕು
ವಿದ್ಯೆಯಿಲ್ಲದವನ ಬರಿ ಮುಖವು ಹಾಳೂರ
ಹದ್ದಿನಂತಕ್ಕು ಸರ್ವಜ್ಞ।।

ಹೀಗೆ ವಿದ್ಯೆಯ ಮಹತ್ವವು ಮಾತೆಯಿಂದ ಮಗುವಿಗೆ ಸಿಗಲ್ಪಡುತ್ತದೆ.

ತಾಯಿಯಾದವಳು ಸಾಧ್ಯವಾದಷ್ಟು ಮಟ್ಟಿಗೆ ತನ್ನ ಸುಖವನ್ನೆಲ್ಲ ಬದಿಗಿರಿಸಿ ಮಗುವಿನ ಏಳಿಗೆಯನ್ನು ಬಯಸುತ್ತಾಳೆ.

ಕಲಿಕಾಲದಲ್ಲಿ ಭಗವಂತ ಕಾಣಿಸಿಕೊಳ್ಳಲಾರ. ಅದಕ್ಕಾಗಿಯೇ ಆತ ತನ್ನ ಪ್ರತಿ ಸೃಷ್ಟಿಯಾಗಿ ತಾಯಿಯನ್ನು ಈ ಭೂಮಿಗೆ ಕಳುಹಿಸಿದನೆಂಬ ಮಾತಿದೆ. ದೇವರು ತಾಯಿಯ ರೂಪದಲ್ಲಿದ್ದುಕೊಂಡು ಈ ಜಗತ್ತಿನಲ್ಲಿ ಪ್ರೀತಿ, ಪ್ರೇಮ, ಕರುಣೆ, ಸಹನೆ ಉಳಿಯುವಂತೆ ಮಾಡಿದ್ದಾನೆ. ಲೋಕದಲ್ಲಿ ಕೆಟ್ಟ ಸಂತಾನ, ಕೆಟ್ಟ ಮಾತೆ ಮಾತ್ರ ಇರಲಾರಳು. ಆಕೆಯ ಲಕ್ಷ್ಯ ಕೇವಲ ಸಂತಾನದತ್ತ. ಅದರೆದುರು ಆಕೆಯ ಸುಖ ನಗಣ್ಯ, ಕೃಷ್ಣನ ಸಾಕು ತಾಯಿ ಯಶೋದಾ, ತಾಯಿ ದೇವಕಿ. ರಾಮನ ತಾಯಿ ಕೌಶಲ್ಯ, ತಮ್ಮ ಮಕ್ಕಳ ಸುಖಕ್ಕಾಗಿ

ತಮ್ಮ ಸುಖವನ್ನು ಕಡೆಗಣಿಸಿದ ಮಹಾಮಾತೆಯರು. ಇತಿಹಾಸದ ಪುಟಗಳನ್ನು ನಾವು ತಿರುವಿದಾಗ ಹೆಸರು ಮಾಡಿದ ಛತ್ರಪತಿ ಶಿವಾಜಿ, ಗಾಂಧೀಜಿ ಮೊದಲಾದ ಎಲ್ಲರ ಬದುಕಿನಲ್ಲಿ ಅವರ ತಾಯಂದಿರ ಯೋಗದಾನ ಮರೆಯಲಾಗದು. ಆ ತಾಯಂದಿರು ಮಕ್ಕಳ ಮನದಲ್ಲಿ ಬಿತ್ತಿದ ದೇಶಪ್ರೇಮವೇ ಇತಿಹಾಸದ ಪುಟಗಳಲ್ಲಿ ಅವರನ್ನು ಅಮರರನ್ನಾಗಿಸಿತು.

ಮಾನವನ ಇತಿಹಾಸದಲ್ಲಿ ಅನಾದಿ ಕಾಲದಿಂದಲೂ ಸ್ತ್ರೀಗೆ ಉನ್ನತ ಸ್ಥಾನವನ್ನು ನೀಡಲಾಗಿದೆ. ಕಾಲದ ಪ್ರವಾಹ ದಲ್ಲಿ ಪುರುಷನ ದಬ್ಬಾಳಿಕೆಯಲ್ಲಿ ಇದರಲ್ಲಿ ಕೆಲವೊಮ್ಮೆ ತುಸು ಏರುಪೇರಾದರೂ ಸ್ತ್ರೀಯ ಅಸ್ತಿತ್ವದ ಪ್ರಾಮುಖ್ಯತೆ ಯನ್ನು ನಾವು ಅಲ್ಲಗಳೆಯುವಂತಿಲ್ಲ. ಅದರಲ್ಲೂ ಸನಾತನ ಹಿಂದೂ ಧರ್ಮದಲ್ಲಿ ಹೆಣ್ಣು ತಾಯಿಯಾಗಿ, ತಂಗಿಯಾಗಿ, ಮಗಳಾಗಿ, ಪತ್ನಿಯಾಗಿ, ಗೆಳತಿಯಾಗಿ ನಿರ್ವಹಿಸುವ ಜವಾಬ್ದಾರಿಗಳು ಅನನ್ಯ. ಶ್ರೀ ಕೃಷ್ಣನ ವಿಶ್ವ ಸ್ವರೂಪದಂತೆ ಅವಳ ಒಡಲಲ್ಲಿ ಅನಂತ ವಿಶ್ವವೇ ಅಡಗಿದೆ. ದಯೆ ಕರುಣೆ ವಾತ್ಸಲ್ಯ ಮಮತೆಯ ಸಾಕಾರ ರೂಪವೇ ಅವಳಾಗಿದ್ದಾಳೆ. ದೈಹಿಕವಾಗಿ ಕೆಲವೊಮ್ಮೆ ಹೆಣ್ಣು ಗಂಡಿಗಿಂತ ದುರ್ಬಲ ಳಾಗಿ ಕಂಡು ಬಂದರೂ ಅವಳಲ್ಲಿರುವ ಸಹನೆ, ತ್ಯಾಗ, ಬುದ್ಧಿ ಗಂಡಿಗಿಲ್ಲ. ಅದಕ್ಕೆಂದೇ ಗರ್ಭ ಧರಿಸಿ ನವಮಾಸ ಹೊತ್ತು ಹೆರುವ ಗುರುತರ ಜವಾಬ್ದಾರಿಯನ್ನು ಪ್ರಕೃತಿ ಹೆಣ್ಣಿಗೆ ನೀಡಿದೆ. ತಾಯಿ ಭೂಮಿಯ ಮೇಲೆ ಕಾಣ ಸಿಗುವ ಪ್ರತ್ಯಕ್ಷ ದೇವರು. ಅವಳಂತೆ ಇನ್ನೊಬ್ಬರಿಲ್ಲ. ಆ ಕಾರಣದಿಂದಲೇ ಆಕೆಯ ಸರಿ ಸಮಾನರು ಯಾರೂ ಇಲ್ಲ.

ಹೆಣ್ಣಿನ ಹತ್ತು ರೂಪಗಳಲ್ಲಿ ತಾಯಿಯ ರೂಪವೂ ಸಾರ್ಥಕವಾದುದು. ಗರ್ಭದಲ್ಲಿ ಸಂತಾನವನ್ನು ಹೊತ್ತು ಕೊಂಡು ಬೆಟ್ಟದಷ್ಟು ಕಷ್ಟವನ್ನು ಸಹಿಸುವ ತಾಯಿಯ ಆ ಅಮೂಲ್ಯ ಸ್ಥಾನವನ್ನು ಗಂಡು ವಿಜ್ಞಾನ ಎಷ್ಟೇ ಮುಂದುವರಿದರೂ ಕಸಿದುಕೊಳ್ಳಲಾರ.

ಅವಳಿಗೆ, ಅವಳ ಅನ್ಯೋನ್ಯತೆಗೆ ಶತ ಕೋಟಿ ಪ್ರಣಾಮಗಳು.

**– ಶ್ರೀ ಜಗದೀಶ್ ಶೆಟ್ಟಿ, ಕನಕ**
**ಗೌರವ ಪ್ರಧಾನ ಕಾರ್ಯದರ್ಶಿ**
**ಥಾಣೆ ಬಂಟ್ಸ್ ಎಸೋಸಿಯೇಶನ್**

ಕವನ

# ಹೆಮ್ಮೆಯ ಕರುನಾಡು
## (ಏಳೆ ಛಂದಸ್ಸಿನಲ್ಲಿ)

**– ಪಾರ್ವತಿ ಶಾಸ್ತ್ರಿ**

ಅರಿಶಿನ ಕುಂಕುಮ ಹಿರಿಮೆಯ ಬಾವುಟ
ಮೆರೆದಿದೆ ಮೇಲೆ ಹಾರುತ್ತ ॥

ಚೆಲುಗನ್ನಡಾಂಬೆಗೆ ಬೆಳಗಿ ನೀರಾಜನ
ಸಲಿಸುವ ನಮನ ಬಾಗುತ್ತ ॥

ಹೊನ್ನಿನ ನುಡಿಯಿದು ಕನ್ನಡ ಭಾಷೆಯು
ಮನ್ನಣೆ ನೀಡಿ ಬೆಳೆಸೋಣ ॥

ನಮ್ಮಯ ನಾಡಿದು ಹೆಮ್ಮೆಯ ಕರುನಾಡು
ಒಮ್ಮತದಿಂದ ಬಾಳೋಣ ॥

ಮುದದಿಂದ ಸುಂದರ ಪದಗಳ ಹೆಣೆಯೋಣ
ಹೃದಯದ ಮಾತು ಸೊಗಸಾಗಿ ॥

ಮನದುಂಬಿ ನುಡಿಯೋಣ ಅನುಗಾಲ ತಾಯ್ನುಡಿ
ಜನಿಸಿದ ನೆಲದ ನೆನಪಲ್ಲಿ ॥

ನಾಗನಾರಾಧನೆ ಶ್ರೀಗಂಧದೂರಲ್ಲಿ
ಸಾಗರದಂಚು ಬಲು ಚೆಂದ ॥

ಹೊಸೆಯುತ್ತ ಕವನವ ಬೆಸೆಯಲು ಮನಗಳ
ಜಸವನ್ನು ಕಂಡು ಆನಂದ ॥

ಂಂಂ

# ಕನಕದಾಸರ ಜೀವನ ಸಾಧನೆ

✍ ಪ್ರೇಮ ಪ್ರಶಾಂತ್

ದಾಸ ಸಾಹಿತ್ಯದ ಒಬ್ಬ ಪ್ರಮುಖ ಕೀರ್ತನಗಾರರಾಗಿದ್ದ ಕನಕದಾಸರು 1508ರಲ್ಲಿ ಹಾವೇರಿ ಜಿಲ್ಲೆಯ ಬಂಕಾಪುರ ತಾಲೂಕಿನ ಬಾಡ ಗ್ರಾಮದಲ್ಲಿ ಜನಿಸಿದರು. ಇವರ ಮೂಲ ಹೆಸರು ತಿಮ್ಮಪ್ಪ. ಬೀರಪ್ಪ ಮತ್ತು ಬಚ್ಚಮ್ಮ ಇವರ ತಂದೆ ತಾಯಿ. ಬಾಡ ಗ್ರಾಮದ ಸುತ್ತಲಿನ 78 ಗ್ರಾಮಗಳಿಗೆ ನಾಡಗೌಡ ಹಾಗೂ ದಂಡನಾಯಕರಾಗಿದ್ದರು. ಕೌಟುಂಬಿಕ ಜೀವನ ವೈರಾಗ್ಯ ಉದಯಿಸಿ ವ್ಯಾಸರಾಯರ ಶಿಷ್ಯರಾದರು. ಕನಕದಾಸರು ಎಂದು ಪ್ರಸಿದ್ಧಿಯಾದರು. ಅವರ ಅಂಕಿತನಾಮ ಆದಿಕೇಶವ. ಇವರು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಇವರು ತಮ್ಮ ಹಾಡುಗಳಲ್ಲಿ ಸಮಾಜದ ಮೂಢನಂಬಿಕೆಗಳನ್ನು ಖಂಡಿಸಿ ಭಗವಂತನನ್ನು ಸೇರುವ ಸರಳ ಮಾರ್ಗವನ್ನು ಬೋಧಿಸಿದ್ದಾರೆ.

ಇವರ ಪತ್ನಿಯ ಹೆಸರು ಸುಜ್ಞಾನವಧೂಟಿ. ಪತಿಯೂ ಕೂಡ ಪತಿ-ಪತ್ನಿಯ ಆಚಾರ-ವಿಚಾರ ನಡೆನುಡಿಗಳಲ್ಲಿ ಮಹಾಸಾಧ್ವಿಯಾಗಿದ್ದರು. ಕಾಗಿನೆಲೆಯಲ್ಲಿ ತನ್ನ ಆರಾಧ್ಯ ಆದಿಕೇಶವನ ದೇವಸ್ಥಾನವನ್ನು ಕಟ್ಟಿಸಿದರು ಕನಕದಾಸರು. ಪ್ರಸಾದ ನೈವೇದ್ಯದ ತಿರುಪತಿಯಂತೆ ವಿಜೃಂಭಣೆಯಿಂದ ನಡೆಯುತ್ತಿತ್ತು. ಪಂಡಿತರು ಯತಿಗಳಾದ ವ್ಯಾಸರಾಯರ ಪ್ರಮುಖ ಶಿಷ್ಯರು ಎಂದರೆ ಪುರಂದರದಾಸರು ಮತ್ತು ಕನಕದಾಸರು. ದಾಸಸಾಹಿತ್ಯ ಗಳಿಸುವಲ್ಲಿ ಇವರಿಬ್ಬರ ಪಾತ್ರ ಪ್ರಮುಖ ವಾದುದು. ಹರಿದಾಸರು ಮತ್ತು ಸಂಗೀತಕ್ಕೂ ನಿಕಟ ಸಂಬಂಧವಿದೆ. ಕನಕದಾಸರು ಗೆಜ್ಜೆ ಕಟ್ಟಿಕೊಂಡು ಹರಿನಾಮ ಸಂಕೀರ್ತನೆ ಮಾಡುತ್ತ ಬೀದಿಬೀದಿಗಳಲ್ಲಿ ತಿರುಗಿ ಮನೆಮನೆಗೆ ಹೋಗಿ ಬೇಡಲು ದಾಸಯ್ಯ ಬಂದನೆಂದು, ವೃತ್ತಿ ಮಾಡುತ್ತಿದ್ದರು. ಹರಿದಾಸರು ಇವರ ಮನಸ್ಸಿನಲ್ಲಿ ಸದ್ಭಾವನೆ ಉಂಟು ಮಾಡಲು ಸಂಗೀತವು ಸೊಗಸಾದ ಮಾರ್ಗ ಎಂಬುದನ್ನರಿತಿದ್ದರು. ಮಾತು ಮತ್ತು ಧಾತು ಬೇರೆ ಬೇರೆ ಎಂದು ಎಂದಿಗೂ ಅವರು ಭಾವಿಸಿದವರಲ್ಲ.

ಕರ್ನಾಟಕದ ನಾಗರಿಕತೆಯ ಕೃಷಿ ಸಂಸ್ಕೃತಿಯನ್ನು ಆಧರಿಸಿದ ಕಾಲದಲ್ಲಿ ಹರಿದಾಸರು ನೀಡಿದ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕೊಡುಗೆಗಳು ಗಣನೀಯವಾಗಿದೆ. ಕನಕದಾಸರ ಬದುಕಿನ ಇತಿಹಾಸದ ಕುರಿತು ಸಿಕ್ಕಿರುವ ವಿವರಗಳನ್ನು ಗಮನಿಸಿದಾಗ ತಾವು ಹುಟ್ಟಿದ ಹಳ್ಳಿಯಲ್ಲಿ ದಂಡನಾಯಕರಾಗಿದ್ದರು. ಯಾವುದೋ ಒಂದು ಸಂದರ್ಭದಲ್ಲಿ ಬದುಕಿನ ಬಗ್ಗೆ ವೈರಾಗ್ಯ ಮೂಡಿ ಹರಿದಾಸರು ಆದರೆಂದು ತಿಳಿದುಬರುತ್ತದೆ. ದೇವಸ್ಥಾನಗಳಲ್ಲಿ ತಮ್ಮ ಜಾತಿಯಿಂದಾಗಿ ಮಠಗಳಲ್ಲಿ ನಿಂದನೆ, ಅವಮಾನ ಅನುಭವಿಸಿದರು. ಉಡುಪಿಯ ಶ್ರೀಕೃಷ್ಣ ದೇವಸ್ಥಾನದಲ್ಲಿ 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ' ಎಂಬವರ ಆರ್ತನಾದ ಸಂಕೀರ್ತನೆಗೆ ಮೆಚ್ಚಿ ದೇವರಮೂರ್ತಿ ಹಿಂದಕ್ಕೆ ತಿರುಗಿ ಇವರಿಗೆ ದರ್ಶನ ನೀಡಿತು.

ಕನಕನ ಕಿಂಡಿ ಕನ್ನಡನಾಡಿನ ಜನಪ್ರಿಯ ದಂತ ಕಥೆಗಳಲ್ಲಿ ಒಂದು. ಪ್ರತಿಭೆಗೆ ಜಾತಿ ಭೇದವಿಲ್ಲ. ಕನ್ನಡ ಶಬ್ದಗಳಲ್ಲಿರುವ ಸಹಜವಾದ ಪದಗಳನ್ನು ಅರ್ಥ ಮಾಡಿಕೊಂಡು ಎಲ್ಲರಿಗೂ ಇಷ್ಟವಾಗುವಂತೆ ದೇವರ ನಾಮಗಳನ್ನು ರಚಿಸಬಲ್ಲ ಪ್ರತಿಭೆ ಕನಕದಾಸರಲ್ಲಿ ಇತ್ತು. ಅವರ ರಚನೆಗಳಲ್ಲಿ ನಲಿದಾಡುವ ಸುಪ್ರಸಿದ್ಧ ಕೀರ್ತನೆಗಳು, ಪ್ರಸಿದ್ಧವಾದ 'ವಾಸುದೇವನು ಲೋಕದೊಡೆಯ' 'ಈಶ ನಿನ್ನ ಚರಣ ಭಜನೆ ', 'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ', 'ನಾನು ನಾನು ಎನ್ನದಿರೋ ಹೀನ ಮಾನವ', 'ದೀಕ್ಷೆಯ ಮಾಡಬೇಡಿ ಯಾರು', 'ವರವ ಕೊಡು ಎನಗೆ ವಾಗ್ದೇವಿ' ಅವರ ಅತಿ ಪ್ರಸಿದ್ಧ ಕೀರ್ತನೆಗಳು. 'ನಮ್ಮಮ್ಮ ಶಾರದೆ', 'ನೀ ಮಾಯೆಯೊಳಗೋ', 'ತಲ್ಲಣಿಸಿದರು ಕಂಡ್ಯ', 'ಏನು ಇಲ್ಲದ ಎರಡು ದಿನದ ಸಂಸಾರ', 'ತೊರೆದು ಜೀವಿಸಬಹುದೆ', 'ಬಾಗಿಲನ್ನು ತೆರೆದು ಸೇವೆಯನು ಕೊಡು ಹರಿಯೆ' ಹೀಗೆ ಅನೇಕ ಕೀರ್ತನೆಗಳನ್ನು ರಚಿಸಿರುವುದನ್ನು ಗಮನಿಸಬಹುದು. ಕರ್ನಾಟಕದ ಸಿನಿಮಾಗಳಲ್ಲಿ ಕನಕದಾಸರ ಹಾಡುಗಳನ್ನು ಬಳಸಿಕೊಳ್ಳಲಾಗಿದೆ.

### ಕನಕದಾಸರ ಜೀವನ ಚರಿತ್ರೆ

ಭಕ್ತ ಕನಕದಾಸ ಚಿತ್ರದಲ್ಲಿ ಡಾ. ರಾಜ್‌ಕುಮಾರ್ ಅಭಿನಯಿಸಿದ್ದಾರೆ. ಪಠ್ಯಪುಸ್ತಕಗಳಲ್ಲಿ, ಬಾಲ ಪಾಠಗಳಲ್ಲಿ, ಮಕ್ಕಳ ಬಾಯಲ್ಲಿ, ಕನಕದಾಸ ವಿರಚಿತ ಹಾಡುಗಳು ಹೇಳಲ್ಪಡುತ್ತವೆ. 'ತಲ್ಲಣಿಸದಿರು ಕಂಡ್ಯ ತಾಳು ಮನವೇ', 'ಗಿಳಿಯ ಮರಿಯನು ತಂದು', 'ಕುಲಕುಲವೆಂದು ಹೊಡೆದಾಡದಿರಿ' ಈ ಮುಂತಾದ ರಚನೆಗಳನ್ನು ಅನೇಕ ಪೀಳಿಗೆಗಳ ಮುಗ್ಧ ಮಕ್ಕಳು ತಮ್ಮ ಶಾಲಾ ಕನ್ನಡ ಪಾಠದ ಭಾಗವಾಗಿ ಕಲಿಯುತ್ತಾ, ರಾಗವಾಗಿ ಹಾಡುತ್ತಾ ಬೆಳೆದಿದ್ದಾರೆ. 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ', 'ರಂಗ ಏನು ಇಲ್ಲದ ಎರಡು ದಿನದ ಸಂಸಾರ' ಈ ಮುಂತಾದ ದೇವರನಾಮಗಳು ಅಷ್ಟೇ ಪ್ರಸಿದ್ಧವಾಗಿವೆ. ಈ ದಾಸ ಶ್ರೇಷ್ಠರು ಸಾಮಾಜಿಕ ಒಳಗೊಳ್ಳುವಿಕೆಯ ದೃಷ್ಟಿಯಿಂದ, ಜಾತಿ ಸಮಾನತೆ ಆಶಯದಿಂದ ಕನ್ನಡ ಕಾವ್ಯದಲ್ಲಿ ಕ್ರಾಂತಿಕಾರಕ ವಸ್ತುಗಳನ್ನು ತಂದು ತಮ್ಮ ಮನೋಹರವಾದ ದೇವರನಾಮಗಳ ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಕೊಡುಗೆ ನೀಡಿ ಅಜರಾಮರರಾಗಿದ್ದಾರೆ.

ಹೆಂಡತಿಯನ್ನು ಕಳೆದುಕೊಂಡು ಇವರು ದುಃಖಿತಪ್ತರಾದರು. ಕೊನೆಗೆ ತಾಯಿಯನ್ನು ಕಳೆದುಕೊಂಡು ಬದುಕಿನಲ್ಲಿ ವೈರಾಗ್ಯವನ್ನು ಅನುಭವಿಸಿದರು. ನಂತರ ಕನಸಿನಲ್ಲಿ ಬಂದ ಆದಿಕೇಶವನ ಮಾತಿನಂತೆ 'ನೀನು ನನ್ನ ದಾಸನಾಗು' ಎಂಬ ಮಾತಿನಂತೆ ಚಿಂತಿಸಿ ಕೊನೆಗೆ ಎಲ್ಲವನ್ನು, ತಿಳಿಸಿ ಇರುವುದೆಲ್ಲವನ್ನೂ ಬಡವರಿಗೆ ದಾನ ಮಾಡಿ ಆದಿಕೇಶವನ ಭಕ್ತರಾದ ಮಾರ್ಗವನ್ನು ಬೋಧಿಸಿದ್ದಾರೆ. ❍

# ಇವರು ನಮ್ಮವರು



ಕಳೆದ ಆರು ದಶಕಗಳಿಗಿಂತಲೂ ಹೆಚ್ಚಿನ ಕಾಲದಿಂದ ಮುಂಬೈ ಮಾಯಾನಗರದ ಹೊರವಲಯದ ಥಾಣೆ ಪರಿಸರದಲ್ಲಿ ವಾಸ್ತವ್ಯ ಹೂಡಿ ಓರ್ವ ಹೆಸರಾಂತ ಹಿರಿಯ ಉದ್ಯಮಿಯಾಗಿ, ನಿಷ್ಠಾವಂತ, ಪ್ರಾಮಾಣಿಕ ಸಮಾಜ ಸೇವಕರಾಗಿ, ಶಿಕ್ಷಣ ಪ್ರೇಮಿಗಳಾಗಿ, ಧಾರ್ಮಿಕ ಚಿಂತಕರಾಗಿ, ಕಲಾಭಿಮಾನಿಗಳಾಗಿ, ಕೊಡುಗೈ ದಾನಿಯಾಗಿ, ಚತುರ ಸಂಘಟಕರಾಗಿ ತಮ್ಮನ್ನು ತಾವು ಪರಿಚಯಿಸಿಕೊಂಡಿರುವ ಮತ್ತು ಹಿರಿಯ ಹೆಮ್ಮೆಯ ಕನ್ನಡಿಗರೆಂಬ ಹೆಗ್ಗಳಿಕೆಗೆ ಪಾತ್ರರಾದವರು ಶ್ರೀ ಡಿ. ಜಿ. ಬೋಳಾರ್ ಅವರು. ಶ್ರೀ ಡಿ. ಜಿ. ಬೋಳಾರ್ ಅಂದರೆ ಶ್ರೀ ದೇಜು ಜಿ. ಬೋಳಾರ್. ಅವರು ತುಂಬಾ ಸರಳ ವ್ಯಕ್ತಿತ್ವದವರಾಗಿದ್ದು, ಮೃದು ಸ್ವಭಾವವನ್ನು ಹೊಂದಿದ್ದು ಥಾಣೆಯ ಓರ್ವ ಸ್ನೇಹಮಯಿ ವ್ಯಕ್ತಿ, ಡಿ. ಜಿ. ಬೋಳಾರ್ ಎಂದೇ ಚಿರಪರಿಚಿತರಾಗಿದ್ದಾರೆ.

ಇವರು ತವರೂರಲ್ಲಿ ಇದೀಗ ನಂದಿಕೂರಿನ ದೇವಿಕೃಪಾ ಹೌಸ್ ನಿವಾಸಿ ಎಂದೆನಿಸಿಕೊಂಡಿದ್ದರೂ, ಮೂಲತಃ ಬೋಳ ಮಾರಗುತ್ತು ದಿ. ಗುಡ್ಡ ಶೆಟ್ಟಿ ಮತ್ತು ಶಿರ್ವ ಮಾನಡ್ಕ ಮೀನಾ ಗುಡ್ಡ ಶೆಟ್ಟಿ ದಂಪತಿಯ ಸುಪುತ್ರರು. ತನ್ನ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಲ್ಲೇ ಪೂರೈಸಿ, ಮುಂದೆ ಆಗಿನ ಕಾಲದ ಎಲ್ಲಾ ತುಳು ಕನ್ನಡಿಗರಂತೆ ಹೊಸ ಬದುಕಿನ ಹುಡುಕಾಟದಲ್ಲಿ ಮುಂಬೈ ಮಹಾನಗರದ ದಾರಿಯನ್ನು ತಮ್ಮದಾಗಿಸಿಕೊಂಡು ಕರ್ಮಭೂಮಿಯ ಈ ಮರಾಠಿ ಮಣ್ಣಿನ ಮಡಿಲನ್ನು ಸೇರಿಕೊಂಡರು.

ಮುಂಬೈ ಮಾಯಾನಗರಿಗೆ ಬಂದವರು ದೊಡ್ಡಮ್ಮನ ಮಗ ಯಕ್ಷಗಾನದ ಖ್ಯಾತ ಅರ್ಥಧಾರಿಗಳಾಗಿದ್ದ ಪಾದೆಬೆಟ್ಟು ವಾಸು ಶೆಟ್ಟಿಯವರ ಸಹಕಾರದಿಂದ ಉದರ ಪೋಷಣೆಗೆ ಉದ್ಯೋಗವನ್ನು ಗಿಟ್ಟಿಸಿಕೊಂಡದ್ದು ಮಾತ್ರವಲ್ಲದೆ ಮುಂದಿನ ವಿದ್ಯಾಭ್ಯಾಸಕ್ಕೆ ಬೋಂಬೆ ಫೋರ್ಟ್ ರಾತ್ರಿ ಶಾಲೆಗೆ ಸೇರುವ ಮೂಲಕ ತಮ್ಮ ವಿದ್ಯಾಭ್ಯಾಸ ಮುಂದುವರಿಸಿದರು. ಅಲ್ಲಿಂದ ಎಸ್‌ಎಸ್‌ಸಿ ವಿದ್ಯಾಭ್ಯಾಸ ಮುಗಿಸಿ ತಾನೋರ್ವ ಇಂಜಿನಿಯರ್ ಆಗಬೇಕೆಂಬ ಕನಸು ಕಾಣುತ್ತ ಶಿಕ್ಷಣ ಮುಂದುವರಿಸಿದರು. ಆದರೆ ಪರಿಸ್ಥಿತಿಯ ಒತ್ತಡದಿಂದ ತನ್ನ ಈ ಕನಸನ್ನು ನನಸು ಮಾಡಲಾಗಲಿಲ್ಲ. ಕಾಲೇಜ್ ಶಿಕ್ಷಣ ಮುಗಿಸುವಂತೆ ಅವರು ಇಂಜಿನಿಯರಿಂಗ್ ಕಂಪನಿಯಲ್ಲಿ ಕೆಲಸಕ್ಕೆ ಸೇರುವುದರಲ್ಲಿ ಯಶಸ್ವಿಯಾದರು. ಸುಮಾರು ಒಂಬತ್ತು ವರ್ಷ ಈ ಕಂಪನಿಯಲ್ಲಿ ಕಠಿಣ ಪರಿಶ್ರಮದಿಂದ ದುಡಿದು ನಂತರ 1970ರಲ್ಲಿ ಥಾಣೆಯಲ್ಲಿ ತನ್ನದೇ ಸ್ವಂತ ಹಿಂದೂಸ್ತಾನ್ ಶಟರ್ಸ್ ಮತ್ತು ವಿಂಡೋಸ್ ಮೆನುಫೆಕ್ಚರಿಂಗ್ ಕಂಪನಿಯನ್ನು ಆರಂಭಿಸಿ ಯಶಸ್ವಿ ಕೈಗಾರಿಕೋದ್ಯಮಿ ಎಂದೆನಿಸಿಕೊಂಡರು.

ಈ ಕಂಪನಿ ಇಂದು ಕೇವಲ ಥಾಣೆ, ಮುಂಬೈ ಪರಿಸರ ಮಾತ್ರವಲ್ಲ ಹೊರವಲಯಗಳಾದ ಡೊಂಬಿವಲಿ, ಕಲ್ಯಾಣ, ಭಿವಂಡಿ, ಉಲ್ಲಾಸ್ ನಗರ, ನವಿ ಮುಂಬೈ ಪರಿಸರದಾದ್ಯಂತ ಪ್ರಸಿದ್ಧಿ ಪಡೆದಿದ್ದರೆ ಅದು ಬೋಳಾರ್ ಅವರ ಪರಿಶ್ರಮದಿಂದ ಸಾಧ್ಯವಾಗಿದೆ. ಈ ಮೂಲಕ ಹಲವಾರು ನಿರುದ್ಯೋಗಿಗಳಿಗೆ ಉದ್ಯೋಗ ನೀಡಿ ಅವರ ಪಾಲಿಗೆ ಅನ್ನದಾತರೆನಿಸಿಕೊಂಡಿದ್ದಾರೆ. ಮುಂದೆ ವಿಭಿನ್ನ ಮುಖಿ ಚಿಂತನೆಯಿಂದ ಅವರು ಮೊತ್ತ ಮೊದಲಿಗೆ ಥಾಣೆ ಪರಿಸರದಲ್ಲಿ ನೆಲೆಸಿರುವ ಸಮಾಜ ಬಾಂಧವರ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಬೇಕೆನ್ನುವ ನೆಲೆಯಲ್ಲಿ ಥಾಣೆ ಬಂಟ್ಸ್ ಅಸೋಸಿಯೇಷನ್ ಸಂಸ್ಥೆಯನ್ನು ಹುಟ್ಟು ಹಾಕುವಲ್ಲಿ ತಮ್ಮ ಬಹುಮುಖ್ಯ ಯೋಗದಾನವನ್ನು ನೀಡಿದ ಹಿರಿಮೆ ಇವರದ್ದು. ಇಷ್ಟು ಮಾತ್ರವಲ್ಲದೆ ಇದರ ಸ್ಥಾಪಕ ಅಧ್ಯಕ್ಷರಾಗಿ ಮೂರು ವರ್ಷ ಸಂಘವನ್ನು ಮುನ್ನಡೆಸಿದ ಖ್ಯಾತಿ ಇವರ ಪಾಲಿಗಿದೆ. ಅಸೋಸಿಯೇಶನ್‌ನ ಸ್ವಂತ ಕಚೇರಿ ಇಲ್ಲದ ಕಾರಣ ಸುಮಾರು ಒಂಬತ್ತು ವರ್ಷ ತನ್ನ ಸ್ವಂತ ಕಾರ್ಯಾಲಯವನ್ನು ಥಾಣೆ ಬಂಟ್ಸ್ ಅಸೋಸಿಯೇಶನ್‌ನ ಎಲ್ಲಾ ರೀತಿಯ ಕಾರ್ಯಕಲಾಪಗಳಿಗೆ ಉದಾರವಾಗಿ ನೀಡಿದ್ದು ಮಾತ್ರವಲ್ಲದೆ ಈಗ

ಥಾಣೆ ಬಂಟ್ಸ್‌ನ ಸ್ವಂತ ಕಚೇರಿಯಲ್ಲಿ ಅವರ ಪತ್ನಿಯ ಹೆಸರಲ್ಲಿ, ರಮಾ ಡಿ. ಬೋಳಾರ್ ಎಂಬ ಕಿರು ಸಭಾಗೃಹವನ್ನು ನಿರ್ಮಿಸಿ ಕೊಟ್ಟ ಶ್ರೇಯಸ್ಸು ಇವರಿಗಿದೆ. ಇಷ್ಟು ಮಾತ್ರವಲ್ಲದೆ ಥಾಣೆಯ ಪರಿಸರದ ಜನಪ್ರಿಯ ಕನ್ನಡ ಮಾಧ್ಯಮ ಶ್ರೀ ಆದಿಶಕ್ತಿ ಕನ್ನಡ ಶಾಲೆಗೆ ಧನ ಸಹಾಯ ನೀಡುತ್ತಾ ಬಂದಿದ್ದಾರೆ. ತೀರಾ ಬಡ ಹೆಣ್ಣು ಮಕ್ಕಳ ಮದುವೆಗೆ ಧನ ಸಹಾಯವನ್ನಿತ್ತು ಮಾನವೀಯತೆಯನ್ನು ಮೆರೆದಿದ್ದಾರೆ.

ಅವರ ಸಮಾಜ ಸೇವೆಗೆ ಹಲವಾರು ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿವೆ. ಅದರಲ್ಲಿ ಡಿವೈನ್ ಸ್ಪಾರ್ಕ್‌ನ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ 150ನೇ ಹುಟ್ಟುಹಬ್ಬದಲ್ಲಿ (2012) ಜರಗಿದ ಸಮಾರಂಭದಲ್ಲಿ, 'ದಾನ ಶೂರ' ಪ್ರಶಸ್ತಿಯೊಂದಿಗೆ ಅಭೂತಪೂರ್ವ ಸನ್ಮಾನ ಹಾಗೂ ಥಾಣೆ ಬಂಟ್ಸ್ ಅಸೋಸಿಯೇಶನ್, ಶ್ರೀ ಆದಿ ಶಕ್ತಿ ಕನ್ನಡ ಸಂಘ ಶಾಲೆ, ಬೋಂಬೆ ಪೋರ್ಟ್ ರಾತ್ರಿ ಶಾಲೆ, ಕಲ್ವಾ ಫ್ರೆಂಡ್ಸ್ ಮೊದಲಾದ ಸಂಸ್ಥೆಗಳು ಅವರನ್ನು ಗೌರವಿಸಿವೆ. ಪ್ರತಿಯೋರ್ವ ಸಫಲ ಪುರುಷನ ಹಿಂದೆ ಸ್ತ್ರೀಯೋರ್ವಳ ಯೋಗದಾನ ಇದ್ದೇ ಇರುತ್ತೆ ಎಂಬ ಮಾತೊಂದಿದೆ. ಆ ಮಾತು ಬೋಳಾರ್ ಅವರ ಪಾಲಿಗೂ ಚೆನ್ನಾಗಿ ಅನ್ವಯಿಸುತ್ತದೆ. ಇವರ ಎಲ್ಲಾ ಕಾರ್ಯ ಚಟುವಟಿಕೆ ಗಳಿಗೆ ಸಹಕಾರ ನೀಡುತ್ತಾ ಬರುತ್ತಿರುವ ಅವರ ಧರ್ಮ ಪತ್ನಿ ರಮಾ ಡಿ. ಬೋಳಾರ್ ಅವರ ಯೋಗದಾನವನ್ನು ಮರೆಯುವಂತಿಲ್ಲ. ಕೆಮ್ಮೂರು ಅನುಗ್ರಹ ನಿವಾಸ ಆದಪ್ಪ ಶೆಟ್ಟಿ ಮತ್ತು ಗುಲಾಬಿ ಶೆಟ್ಟಿ ದಂಪತಿಗಳ ಸುಪುತ್ರಿಯಾದ ಇವರ ವಿವಾಹವು 27 ಜೂನ್ 1971ರಂದು ಜರಗಿತ್ತು. ಇವರಿಗೆ ಓರ್ವ ಮಗ ಸುನಿಲ್ ಡಿ. ಬೋಳಾರ್ ಇಂಜಿನಿಯರ್ ಆಗಿದ್ದು ಎಂಬಿಎ ಕೂಡಾ ಮುಗಿಸಿದ್ದಾರೆ. ಬೋಳಾರ್ ಅವರ ಮಗಳು ಸ್ಮಿತಾ ಎನ್. ಶೆಟ್ಟಿ ಎಂ.ಕಾಂ. ಪದವೀಧರೆ. ಬಿ. ಕಾಂ. ಪದವೀಧರೆ ಸೊಸೆ ಗೀತಾ ಎಸ್. ಬೋಳಾರ್ ಹಾಗೂ ಇಂಜಿನಿಯರಿಂಗ್ ಹಾಗೂ ಎಂಬಿಎ ಪದವೀಧರ ನರೇಂದ್ರ ಎಸ್. ಶೆಟ್ಟಿ ಹಾಗೂ ಮೊಮ್ಮಕ್ಕಳಾದ ಸಾಯಿಶ್, ಆದ್ಯ, ಆರ್ಯನ್, ಈಶಾನ್ವಿ ಅವರೊಂದಿಗೆ ಸಂತೃಪ್ತ ಸಂಸಾರ ಡಿ. ಜಿ. ಬೋಳಾರ್ ಅವರದ್ದು.

ಬೋಳಾರ್ ಅವರ ಬದುಕು ಬಂಗಾರವಾಗಲಿ. ಅವರ ಎಲ್ಲಾ ಆಸೆಗಳು ಕೈಗೂಡಲೆಂದು ನಾವು ಆಶಿಸೋಣ. ❍

ಕವನ

## ಓ ಮನಸ್ಸೇ

– ಜಿ. ಟಿ. ಆರ್. ದುರ್ಗ,
ಜಿ. ಎಚ್. ಎಲ್, ಬಂಗಾರಪೇಟೆ

ಚಂಚಲೆ ಓ ಮನಸೇ ಚಂಚಲೆ
ಕ್ಷಣದಲ್ಲಿ ಬದಲಾಗಿ ಇರುಳಂತೆ ಕತ್ತಲಾಗಿ
ಹಗಲನ್ನು ಹುಡುಕುವ ತವಕದಲ್ಲಿ
ಓಡುತ್ತಿದೆ ಚಂಚಲೆ ಓ ಮನಸ್ಸೇ ಮನಸ್ಸೇ

ಎಲ್ಲೂ ನಿಲ್ಲದು ಅದು ಯಾರನ್ನೂ ಕೇಳದು ಇದು
ಹಿಡಿತಕ್ಕೆ ಸಿಗದೆ ಓಡುತ್ತೈತೆ ಮನಸ್ಸು ಯಾರನ್ನೂ ನೋಡದೆ
ಬಿರಿದ ಬಂಡೆಯಂತೆ, ಕುಸಿದ ನೆಲದಂತೆ
ಒಣಗಿದ ಮರದಂತೆ, ಬಸಿದ ಜಲದಂತೆ
ಕರಗುತ್ತಿದೆ ಓ ಮನಸ್ಸೇ ಓ ಮನಸ್ಸೇ ಮನಸ್ಸೇ

ಎರಡು ಗಾಡಿಯ ಚಕ್ರ ಎರಡು ಕಣ್ಣಿನ ವಕ್ರ
ಬಿರಿದ ತುಟಿಗಳ ಚಿತ್ರ ಹಾರುವ ಮನಸ್ಸಿನ ಪತ್ರ
ಕಡಿದಾಗಿದೆ ಇಳಿದಾಗಿದೆ ಬೆಟ್ಟದ ಮೇಲತ್ತಿದೆ
ಹೊಗಳಿಕೆಗೆ ಹಿಗ್ಗಿ ತೆಗಳಿಕೆಗೆ ಕುಗ್ಗಿ ಅಸಮಾಧಾನ ಮೂಡಿ
ಕಣ್ ಮುಚ್ಚಿದೆ ಮನದ ಪೊರೆ ಮುಚ್ಚಿದೆ

ಎಲ್ಲವೂ ನನ್ನದೆಂದು ಎಲ್ಲವ ದೂರ ತಳ್ಳಿ
ನಿನ್ನಯ ಕನಸ್ಸಿನಲ್ಲಿ ಚಿಂತೆಯ ಕಡಲಿಗೆ ತಳ್ಳಿ
ಸಂಕಟ ಪಡುವ ಮನಸ್ಸು ಚಿತೆ ದಾರಿ ಕೊನೆಗೆ
ಸಂದಿಸದಿರ ಮನದಲ್ಲಿ ಚಿಂತೆಗಳನ್ನು
ಸಂಕಟವಿದ್ದರೂ ನೀ ಸಂತಸಪಡಿಸು ನೀ ಮನಕ್ಕೆ

❍❍❍

# ಸ್ವಾಮಿ ವಿವೇಕಾನಂದ

✍ ತಾರಾನಾಥ ಸವಣೂರು
ಮುಖ್ಯಗುರು ಪಿಎಂಶ್ರೀ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ
ವೀರಮಂಗಲ ಪುತ್ತೂರು ದ. ಕ.

ಜನವರಿ 12, ಪ್ರತಿ ವರ್ಷ ರಾಷ್ಟ್ರೀಯ ಯುವ ದಿನವಾಗಿ ಆಚರಿಸಲಾಗುತ್ತಿದೆ. ಅಪ್ರತಿಮ ವಾಗ್ಮಿ, ಅನುಪಮ ಮಾನವತಾವಾದಿ, ಯುವ ಪ್ರೇರಕ, ನವ ಚೇತನ ಸ್ವಾಮಿ ವಿವೇಕಾನಂದರವರ ಜನುಮದಿನ. ತನ್ನ ಪ್ರಭಾವಶಾಲಿ ತತ್ವಜ್ಞಾನ, ಉಚ್ಚಮಟ್ಟದ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದ ಎಲ್ಲರ ಗಮನ ತನ್ನ ಕಡೆ ದೃಷ್ಟಿಯಿಡುವಂತೆ ಮಾಡಿದ ಭವ್ಯ ವ್ಯಕ್ತಿತ್ವ. ಬಾಲ್ಯದಿಂದಲೇ ಚುರುಕು, ಅತೀವ ಬುದ್ಧಿ ಮತ್ತೆ, ಪ್ರಶ್ನಿಸುವ ಗುಣ, ಅನುಲ್ಲಂಘ್ಯ ವಿಚಾರಗಳನ್ನು ಬೇಧಿಸುವ ಕೌಶಲ್ಯ ಇವುಗಳಿಂದಲೇ ಎಲ್ಲರ ಗಮನ ತನ್ನತ್ತ ಸೆಳೆಯುತ್ತಾ ಬೆಳೆದ ನರೇಂದ್ರ ಮುಂದೆ ಬೆಳೆದು ಅಪಾರ ಮೇಧಾವಿ, ಆಧ್ಯಾತ್ಮ ಗುರು ಶ್ರೀ ರಾಮಕೃಷ್ಣ ಪರಮಹಂಸ ರಿಂದ ದಿವ್ಯ ದೀಕ್ಷೆ ಪಡೆದು ನರೇಂದ್ರನಾಥ ದತ್ತ ಸ್ವಾಮಿ ವಿವೇಕಾನಂದರಾದರು.

**ಜನನ :**

❖ ವಿವೇಕಾನಂದರ ಪೂರ್ವದ ಹೆಸರು ನರೇಂದ್ರನಾಥ ದತ್ತ. ಇವರು 1863, ಜನವರಿ 12ರಂದು ಕಲ್ಕತ್ತೆಯಲ್ಲಿ ಜನಿಸಿದರು. ತಂದೆ ವಿಶ್ವನಾಥ ದತ್ತ. ತಾಯಿ ಭುವನೇಶ್ವರಿ ದೇವಿ. ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ 'ವಿವೇಕಾನಂದ' ಎಂಬ ಹೆಸರನ್ನು ಪಡೆದರು. ಕಲ್ಕತ್ತೆಯ ಸ್ಕಾಟಿಷ್ ಚರ್ಚ್ ಕಾಲೇಜಿನಲ್ಲಿ ತತ್ವಶಾಸ್ತ್ರ ಅಧ್ಯಯನ ಮಾಡಿದರು.

"ಮಾನವನಲ್ಲಿ ಈಗಾಗಲೇ ಅಡಗಿರುವ ದೈವತ್ವವನ್ನು ಪ್ರಕಾಶಪಡಿಸುವುದೇ ಧರ್ಮ."

❖ ಗುರುಗಳಿಂದ ಪಡೆದ ಬೋಧನೆಯಿಂದ, ಭಗವಂತನು ಸರ್ವಾಂತರ್ಯಾಮಿ, ಪ್ರತಿಯೊಬ್ಬನಲ್ಲೂ ದೇವರಿದ್ದಾನೆ. ದರಿದ್ರ ನಾರಾಯಣ ಸೇವೆಯ ನಿಜವಾದ ಸೇವೆ ಹೀಗೆ ಮುಂತಾದ ನಂಬಿಕೆಗಳನ್ನು ಆದಿಯಾಗಿಟ್ಟು ನಮ್ಮಲ್ಲಿ ಎಲ್ಲರೂ ಮುಕ್ತರಾಗುವವರೆಗೆ ಯಾರೊಬ್ಬರೂ ಮುಕ್ತರಾಗಲಾರರು. ಹಾಗೆಯೇ ವೈಯಕ್ತಿಕ ಮುಕ್ತಿಯ ಆಸೆಯನ್ನು ಬಿಟ್ಟು ಎಲ್ಲರ ಮುಕ್ತಿಗಾಗಿ ಶ್ರಮಿಸುವವನೇ ಶ್ರೇಷ್ಠ ಎಂದು ಬೋಧಿಸಿದರು. ನಿಮ್ಮ ವಿವಾಹ, ನಿಮ್ಮ ಐಶ್ವರ್ಯ, ನಿಮ್ಮ ಜೀವನ ಬರಿಯ ಇಂದ್ರಿಯ ಭೋಗಕ್ಕಲ್ಲ, ವ್ಯಕ್ತಿಗತ ಸುಖಕ್ಕಲ್ಲ ಮರೆಯದಿರಿ ಎಂದು ಅಭಿಪ್ರಾಯಪಟ್ಟರು. ಅಪಾರ ದೇಶಭಕ್ತಿಯಿಂದ ನಮ್ಮ ಜನ್ಮವಿರುವುದೇ ಜಗನ್ಮಾತೆಯ ಅಡಿದಾವರೆಗಳಲ್ಲಿ ಬಲಿದಾನಕ್ಕಾಗಿ ಹಾಗೂ ಭಾರತ ಭೂಮಿಯು ನಮ್ಮ ಪರಂಧಾಮ ಭಾರತದ ಶುಭವೇ ನಮ್ಮ ಶುಭ ಎಂದು ದೇಶದ ಜನತೆಗೆ ಕರೆಕೊಟ್ಟರು.

❖ 1893ರ ಚಿಕಾಗೋ ಸರ್ವಧರ್ಮ ಸಮ್ಮೇಳನದ ವರೆಗೆ ಹುದುಗಿದ್ದ ಲಾವರಸದಂತೆ ಸದ್ದಿಲ್ಲದೇ ಸರ್ವಧರ್ಮ ಸಮ್ಮೇಳನದಲ್ಲಿ ಜ್ವಾಲಾಮುಖಿಯಂತೆ ಸದ್ದು ಮಾಡಿದ ಮಹಾಪುರುಷ. ಅವರು ತಮ್ಮ ಭಾಷಣದಲ್ಲಿ ಅಮೇರಿಕಾದ ನನ್ನ ಭ್ರಾತೃ, ಭಗಿನಿಯರೇ ಎಂದು ಸಂಭೋದಿಸಿ ನೆರೆದಿದ್ದ ಎಲ್ಲರಲ್ಲೂ ಭ್ರಾತೃತ್ವದ ಭಾವನೆ ಹುಟ್ಟಿಸಿದ ಮೊದಲ ವಿಶ್ವ ಮಾನವನಾಗಿ ರೂಪುಗೊಂಡರು. ಅವರು ಭಾರತದ ರಾಯಭಾರಿಯಾಗಿ ಭಾರತ ದೇಶದ ಶತಶತಮಾನಗಳಿಂದ ನಡೆದು ಬಂದ ಸಂಸ್ಕಾರ, ಸಂಸ್ಕೃತಿ, ಜೀವನ ಶೈಲಿ ಹಾಗೂ ಹಿಂದೂ ಧರ್ಮದ ಒಟ್ಟಾರೆ ಸಾರವನ್ನು ಜಗತ್ತಿಗೆ ತಿಳಿಸಿ ಕೊಡುವ ಕಾರ್ಯ ಮಾಡಿದರಷ್ಟೇ? ಆದರೆ ಅದು ವಿಶ್ವದೆಲ್ಲೆಡೆ ಪಸರಿಸಿ ಪ್ರತಿಫಲಿಸುವಂತೆ ಮಾಡಿ, ಭಾರತೀಯರ ಬಗೆಗಿದ್ದ ತಪ್ಪು ಕಲ್ಪನೆಯನ್ನು ಹೊಡೆದೋಡಿಸಿ ಇಡೀ ಜಗ ಸಮುದಾಯ ಭಾರತದತ್ತ ಅಧ್ಯಾತ್ಮ ಗೌರವದಿಂದ, ವಿಶ್ವಗುರುವಿನ ಮಟ್ಟದಲ್ಲಿ ನೋಡುವಂತೆ ಮಾಡಿತು. ಇದನ್ನೇ ಮನಗಂಡು ರಾಷ್ಟ್ರಪಿತ ಹೇಳಿರಬೇಕು, ಶ್ರೀಕೃಷ್ಣನನ್ನು ಅರಿಯಬೇಕೆಂದಿದ್ದರೆ ಭಗವದ್ಗೀತೆಯನ್ನು ಓದಿ, ಭಾರತವನ್ನು ತಿಳಿಯಬೇಕೆಂದಿದ್ದರೆ ಸ್ವಾಮಿ ವಿವೇಕಾನಂದರನ್ನು ಓದಿ.

❖ 'ಅವತಾರ ಪುರುಷ ಗೌತಮ ಬುದ್ಧನು ಹೇಳುತ್ತಾನೆ- 'ಒಂದು ಮರವು ಅದರ ಫಲದಿಂದ ಗುರುತಿಸಲ್ಪಡುತ್ತದೆ, ಮನುಷ್ಯ ಅವನ ಕೃತಿ ಹಾಗೂ ವಿಚಾರಗಳಿಂದ ಗುರುತಿಸಲ್ಪಡು ತ್ತಾನೆ'ಎಂದು. ಈ ಮಾತಿಗೆ ಉತ್ತರಾಧಿಕಾರಿಯಂತೆ ವಿವೇಕಾನಂದರು ನರೇಂದ್ರನಿಂದ ವಿಶ್ವ ಮಾನವನಾಗಿ, ವಿಶ್ವ ವಿಜೇತನಾಗಿ, ಅಜೇಯನಾಗಿ ಬೆಳೆದದ್ದು ತಮ್ಮ ವಿಚಾರದಿಂದ ದಿವ್ಯ ಸಮ್ಯಕ್ ದೃಷ್ಟಿಯಿಂದ ಹಾಗೂ ವೇದ ಸಮಾನವಾದ ಮಾತಿನಿಂದ ಹೊರತು ಉಟ್ಟ ಖಾವಿ ಬಟ್ಟೆಯಿಂದಲ್ಲ ಅಥವಾ ಸುಂದರ ಮೈಕಟ್ಟಿನಿಂದ ಅಲ್ಲವೇ ಅಲ್ಲ.?

❖ ಹೌದು, ಸ್ವಾಮಿ ವಿವೇಕಾನಂದರು ಯುವಕರ ಸ್ಫೂರ್ತಿಯ ಸೆಲೆ. ಅವರು ಯುವಕರ ಬಗೆಗೆ ಹೇಳುತ್ತಿದ್ದ ಮಾತೆಂದರೆ ಯುವಕರು ಹೇಡಿಗಳಾಗಬಾರದು ಪುರುಷಸಿಂಹಗಳಾಗಬೇಕು. ನೀವು ಎಂದೂ ಪರಾವಲಂಬಿಗಳಾಗಬಾರದು. ನಿಮ್ಮ ಬದುಕಿನ ಶಿಲ್ಪಿಗಳು ನೀವೇ' ಎಂದು. ಆದರೂ ಇಂದು ಯುವಕ ಎನ್ನುವಲ್ಲಿ ಏನೋ ಬಿರುಕು ಕಾಣುತ್ತಿದೆ. ಒಂದಕ್ಕೆ ಒಂದು ಕೂಡಿದರೆ ದೊಡ್ಡ ಒಂದಾಗುತ್ತದೆ. ದೊಡ್ಡ ಒಂದಾದರೆ ಭೇದವಿಲ್ಲ. ಅದು ಎರಡಾದರೆ ಭೇದ ಮತ್ತು ಭಿನ್ನ. ಇಂತಹ ಮೂಲಜ್ಞಾನದ ಕೊರತೆಯಿಂದಲೋ ಏನೋ ಇಂದು ಶುದ್ಧದೇಶಭಕ್ತಿಯಿಂದ, ವೈಯಕ್ತಿಕತೆಯಿಂದ ಮುಕ್ತರಾದ ಶಿಸ್ತು ಸಚ್ಚಾರಿತ್ರ್ಯಗಳುಳ್ಳ ವ್ಯಕ್ತಿಗಳನ್ನು ಯಾರೂ ನಿರ್ಮಿಸುತ್ತಿಲ್ಲ ಮತ್ತು ಅದರ ನಿರ್ಮಾಣಕ್ಕೆ ನೆರವಾಗುವ ಯಾವ ವ್ಯವಸ್ಥೆಯೂ ನಮ್ಮ ಸಮಾಜದ ಮುಂದಿಲ್ಲ. ಇದರ ಮೂಲಸ್ಸೂಚನೆಯಿಂದಲೇ ಇರಬೇಕು. 1835ರ ಸುಮಾರಿಗೆ ಬ್ರಿಟನ್ ಸಂಸತ್ತಿನಲ್ಲಿ ಲಾರ್ಡ್ ಮೆಕಾಲೆ ಭವಿಷ್ಯ ನುಡಿದಿದ್ದನಂತೆ.

ನಾನು ಭಾರತದ ಉದ್ದಗಲಕ್ಕೂ ಪ್ರವಾಸ ಮಾಡಿದ್ದು, ನಾನು ಒಬ್ಬನೇ ಒಬ್ಬ ಭಿಕ್ಷುಕರನ್ನಾಗಲಿ, ಕಳ್ಳನನ್ನಾಗಲಿ ನೋಡಿಲ್ಲ, ಅಷ್ಟೊಂದು ಶ್ರೀಮಂತ ದೇಶ, ಉನ್ನತ ನೈತಿಕ ಮೌಲ್ಯಗಳು, ಸಾಮರ್ಥ್ಯವಂತ ಜನರು, ಇಂಥ ದೇಶದ ಬೆನ್ನುಮೂಳೆಯಾದ ಸಂಸ್ಕೃತಿ ಹಾಗೂ ಆಧ್ಯಾತ್ಮಿಕ ಕೇಂದ್ರಗಳ ಶಕ್ತಿಯನ್ನು ಮುರಿಯದ ಹೊರತು ಅಂಥ ದೇಶವನ್ನು ನಾವು ಎಂದಿಗೂ ವಶಪಡಿಸಿಕೊಳ್ಳಲು ಸಾಧ್ಯವೇ ಇಲ್ಲ. ಅದಕ್ಕಾಗಿ ನಾವು ಅಲ್ಲಿನ ಪ್ರಾಚೀನ ಶೈಕ್ಷಣಿಕ ವ್ಯವಸ್ಥೆಯನ್ನು, ಅಲ್ಲಿನ ಸಂಸ್ಕೃತಿಯನ್ನು ಬದಲಾಯಿಸಿ ವಿದೇಶಿ ಸಂಸ್ಕೃತಿ ಹಾಗೂ ಆಂಗ್ಲವೇ ಉತ್ತಮ ಮತ್ತು ಅದು ತಮ್ಮದಕ್ಕಿಂತ ಹೆಚ್ಚಿನದು ಎಂದು ಭಾರತೀಯರು ಭಾವಿಸುವಂತೆ ಮಾಡಬೇಕು. ಆಗ ಅವರು ಸ್ವಾಭಿಮಾನ ಕಳೆದುಕೊಳ್ಳುತ್ತಾರೆ. ಮೂಲ ಸಂಸ್ಕೃತಿ ನಶಿಸಿ ಹೋಗುತ್ತದೆ ಮತ್ತು ಆ ರಾಷ್ಟ್ರ ಸಂಪೂರ್ಣ ನಮ್ಮ ಅಧಿಪತ್ಯಕ್ಕೆ ಬರುತ್ತದೆ ಎಂದು ಈ ಮೇಲಿನ ವಾಕ್ಯ ಆತನ ದೂರದೃಷ್ಟಿಗೆ ಹಿಡಿದ ಕನ್ನಡಿ. ಇಂದು ಆತನ ಮಾತಿನ ಬಗೆಗೆ ಆಲೋಚಿಸುವಂತೆ ಮಾಡಿದೆ. ಮೇಲಿನ ವಾಕ್ಯಗಳು ಯುವ ದಿನಾಚರಣೆಯ ಹೊಸ್ತಿಲಲ್ಲಿ ಬಾಲಿಶವಾದರೂ ಯುವ ವಿವೇಕಿಗಳ ದೇಶಭಕ್ತಿ ಜಾಗೃತವಾಗಲಿ ಎಂಬ ಉದ್ದೇಶ ಮಾತ್ರ. ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ ವಿಷಯ ಸಂಗ್ರಹಿಸಿ ತಲೆಭಾರವಾಗಿಸುವುದನ್ನು ಬಿಟ್ಟು ದೇಶಭಕ್ತಿಯ ಬರಿಸಿ, ಬುದ್ಧಿಯ ಕೆರಳಿಸಿ, ಮನಸನ್ನು ಅರಳಿಸುವಂತಿರಬೇಕು?

❖ ಯಾವ ಕೆಲಸಕ್ಕೂ ಬಾರದೆ ಬಿಸುಟ ಕಬ್ಬಿಣವೂ ತುಕ್ಕು ಹಿಡಿದು ಮಣ್ಣಾಗುವುದು. ನೇಗಿಲಿನ ಕೊನೆಯಲ್ಲಿರುವ ಕಬ್ಬಿಣವು ಸವೆದು ಕೊನೆಗೆ ಮಣ್ಣು ಪಾಲಾಗುವುದು. ಹೌದು ಎರಡೂ ಮಣ್ಣು ಆಗುವುದೇ ಆದರೆ ಎರಡನೆಯದ್ದು ತೆರೆಸುವುದು ಕಣ್ಣು, ಕೊಡುವುದು ಹಣ್ಣು ಅಷ್ಟೇ? ಹೌದು ವಿವೇಕಾನಂದರ ಹೆಸರು ಕೇಳಿದರೆ ವಿವೇಕ ಜಾಗೃತವಾಗುವುದು, ಭಾವಚಿತ್ರ ನೋಡಿದರೆ ಸ್ಫೂರ್ತಿಯಾಗುವುದು, ವಿವೇಕವಾಣಿ ಕೇಳಿದರೆ ರೋಮಾಂಚನವಾಗುವುದು, ಅವರ ಸಂದೇಶ ಓದಿದರೆ ಮನಸ್ಸು ನಿರ್ಮಲವಾಗುವುದು, ಅವರು ಮಾಡಿದ ಭಾಷಣ, ಬರೆದ ಪತ್ರ, ನಡೆಸಿದ ಚರ್ಚೆ ಆಕರ ಗ್ರಂಥಗಳಾಗಿವೆ. ಯುವಕರ ನರನಾಡಿಗಳಾಗಿರುವ ಇವುಗಳಲ್ಲಿ ಕೆಲವನ್ನಾದರೂ ಓದಿ ಅಖಂಡ ಭಾರತದ ಪರಿಕಲ್ಪನೆಗೆ ನಾಂದಿ ಹಾಡಿದ ಆ ಮಹಾಚೇತನಕ್ಕೆ ನಾವು ನೀವು ನೀಡುವ ಗುರು ಗೌರವ ವಂದನೆ. ಎಲ್ಲ ಯುವಕರ ವಿವೇಕ ಜಾಗೃತವಾಗಲಿ ಎಂದು ಆಶಿಸುತ್ತಾ, ರಾಷ್ಟ್ರೀಯ ಯುವ ದಿನಾಚರಣೆಯ ಶುಭಾಶಯಗಳು. ❍

ಕವನ

## ಮೂರ್ಖ ಶಿಷ್ಯರು

(ಗೀತಿಕೆ)

– ಬೋರೇಗೌಡ–ಅಂಕಪುರ

ಗುರುವಿನ ಪಾಠವ ಕೇಳಲು
ಭರದಲಿ ಹೊಳೆಯನು ದಾಟಿ ಬಂದರು
ಕರವನು ಮುಗಿದು ಬೇಡುತ
ಚರಣಕೆ ನಮಿಸುತ ಸನಿಹ ನಿಂತರು

ಕಲಿಯಲು ಬಂದ ವಟುಗಳ
ಚಲನೆಯ ನೋಡಿದ ಗುರುವು ಮನದಲಿ
ಗಲಿಬಿಲಿಗೊಂಡು ತವಕಿಸಿ
ಕಳವಳ ಪಟ್ಟರು ನಿಜವು ತಿಳಿಯುತ

ಗುರುವಿನ ಮಹಿಮೆ ತಿಳಿಯದೆ
ತಿರುಗುತ ಮೆರೆದರು ಬರೆದು ಕಲಿಯದೆ
ಪರಿಪರಿ ವಿಧದಿ ಕೊರಗುತ
ಮರುಕವ ಪಡುತಲಿ ನೊಂದು ನಲುಗುತ

ಬುದ್ಧಿಯ ಮಾತು ಕೇಳದೆ
ಶುದ್ಧದ ನಡೆಯನು ಕಲಿತು ಬಾಳದೆ
ಪೆದ್ದರ ರೀತಿ ವರ್ತಿಸಿ
ಬದ್ಧತೆ ತಿಳಿಯದ ಮೂರ್ಖ ಮತಿಗಳು ❍

# ಭಾರತದ ಅನರ್ಘ್ಯರತ್ನ ವಿವೇಕಾನಂದ

✍ ಶೈನಾ ಶ್ರೀನಿವಾಸ ಶೆಟ್ಟಿ, ಉಡುಪಿ

ಸ್ವಾಮಿ ವಿವೇಕಾನಂದರು ಶಿಕಾಗೋಗೆ ತೆರಳುವುದಕ್ಕೆ ಮುನ್ನ ಬೆಳಗಾವಿ, ಬೆಂಗಳೂರು, ಮೈಸೂರಿಗೆ ಭೇಟಿ ನೀಡಿದ್ದರು ಎಂಬುದು ಇಂದಿಗೂ ಸ್ಮರಣೀಯ. ಅವರು ತಂಗಿದ್ದ ಕಟ್ಟಡಗಳನ್ನು ಈಗ ಸ್ಮಾರಕಗಳಾಗಿ ಪರಿವರ್ತಿಸಲಾಗಿದೆ. 1892 ಅಕ್ಟೋಬರ್-ನವೆಂಬರ್‌ನಲ್ಲಿ ಕನ್ನಡದ ನೆಲದಲ್ಲಿ ಓಡಾಡಿದ್ದರು ಎಂಬುದನ್ನು ಈಗ ನೆನಪಿಸಿಕೊಳ್ಳುವುದೇ ರೋಮಾಂಚನ ಸಂಗತಿ. ಲಕ್ಷಾಂತರ ಯುವಕರನ್ನು ಬಡಿದೆಬ್ಬಿಸಿದ ಆ ಧ್ವನಿ ಈಗಲೂ ಮೈಸೂರು ಮಹಾರಾಜರ ಬಳಿ ಗ್ರಾಮೋಫೋನ್‌ನಲ್ಲಿ ಉಳಿದು ಕೊಂಡಿದೆ ಎಂಬುದೇ ಹೆಮ್ಮೆಯ ಸಂಗತಿ.

'ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ. ಆದರ್ಶ ಇಲ್ಲದೆ ಬದುಕಿದರೆ ಅದು ಬದುಕಿಗೆ ಅವಮಾನ' ಎಂಬ ಸ್ವಾಮಿ ವಿವೇಕಾನಂದರ ನುಡಿಮುತ್ತು ಕೇಳುತ್ತಿದ್ದಂತೆ ಮನಸ್ಸಿನೊಳಗೆ ಏನಾದರೊಂದು ಸಾಧಿಸಲೇಬೇಕು ಎಂಬ ಚೈತನ್ಯ ನಮ್ಮಲ್ಲಿ ಮೂಡುತ್ತದೆ.

ಸ್ವಾಮಿ ವಿವೇಕಾನಂದರು ನಮ್ಮನ್ನು ಅಗಲಿ 162 ವರ್ಷಗಳು ಕಳೆದಿದೆ. ಆದರೆ ಇಂದಿಗೂ ಕೂಡ ಪ್ರಪಂಚದಾದ್ಯಂತ ಎಲ್ಲರಿಗೂ ಅವರ ಆದರ್ಶದ ಮಾತು, ಸಾಧನೆಗಳ ಬಗ್ಗೆ ತಿಳಿದಿದೆ ಎಂದರೆ ಅವರು ಎಂತಹ ಮಹಾನ್ ವ್ಯಕ್ತಿ ಎಂಬುದು ಅರ್ಥವಾಗುತ್ತದೆ. ಜಗತ್ತಿನ ಇತಿಹಾಸದಲ್ಲಿ ಕೆಲವೇ ಕೆಲವು ಮಹಾನ್ ಸಾಧಕರಲ್ಲಿ ಸ್ವಾಮಿ ವಿವೇಕಾನಂದರು ಅಗ್ರಗಣ್ಯರು.

'ನಿಮ್ಮನ್ನು ನೀವು ಜಯಿಸಿ ಆಗ ಇಡೀ ಜಗತ್ತೇ ನಿಮ್ಮದಾಗುತ್ತದೆ' ಎಂಬ ಅವರ ಒಂದು ಮಾತೇ ಅದೆಷ್ಟೋ ಯುವ ಜನತೆಯ ಮನಸ್ಸಿನೊಳಗೆ ಸಾವಿರ ವೋಲ್ಟ್ ವಿದ್ಯುತ್ ಪ್ರವಹಿಸಿದಷ್ಟು ಶಕ್ತಿಯನ್ನು ತಂದುಕೊಟ್ಟಿದೆ. ಅವರು ಸಂಸ್ಕೃತ, ವ್ಯಾಕರಣ, ತರ್ಕಶಾಸ್ತ್ರಗಳನ್ನು ಸಾಂಗವಾಗಿ ಅಭ್ಯಾಸ ಮಾಡಿದ್ದರು. ಹಾಗೆಯೇ ಇಂಗ್ಲಿಷಿನಲ್ಲಿ ಕಾವ್ಯ, ಇತಿಹಾಸಗಳನ್ನು ಓದಿ ತಿಳಿದಿದ್ದರು. ವಿಜ್ಞಾನ, ಶಾಸ್ತ್ರ, ತತ್ವ, ಮೌಲ್ಯಗಳನ್ನು ವಿಸ್ತಾರವಾಗಿ ಪರಾಮರ್ಶಿಸಿ ಅರ್ಥಪೂರ್ಣವಾಗಿ ವಿವರಿಸಬಲ್ಲವರಾಗಿದ್ದರು. ಅವರ ವಿದ್ಯಾ ಪ್ರಾವೀಣ್ಯತೆ, ಅಗಾಧವಾದ ಜ್ಞಾನ ಎಂತವರನ್ನೂ ಕೂಡ ಮೂಕವಿಸ್ಮಿತರನ್ನಾಗಿಸುತ್ತಿತ್ತು.

ಭಾರತ ಕಂಡ ಉತ್ಕೃಷ್ಟ ಆಧ್ಯಾತ್ಮಿಕ ನಾಯಕರು ಮತ್ತು ಸಮಾಜ ಸುಧಾರಕರಲ್ಲಿ ಸ್ವಾಮಿ ವಿವೇಕಾನಂದರು ಅಗ್ರಗಣ್ಯರು. ಮೌಲ್ಯಯುತ ಮಾತು, ಸಮಾಜ ಸುಧಾರಣೆ, ದೇಶಪ್ರೇಮ ಹೀಗೆ ನೂರಾರು ಸ್ಥರದಲ್ಲಿ ಅವರ ಪ್ರತಿ ಹೆಜ್ಜೆ ಗುರುತು ಪ್ರತಿಯೊಬ್ಬ ಯುವ ಜನತೆಗೂ ದಾರಿದೀಪ. ಹಾಗಾಗಿ ಅವರ ಜನ್ಮದಿನವಾದ 'ಜನವರಿ 12ನ್ನು' ರಾಷ್ಟ್ರೀಯ ಯುವ ದಿನವನ್ನಾಗಿ 1985ರಿಂದ ಆಚರಿಸಲಾಗುತ್ತದೆ.

ಸ್ವಾಮಿ ವಿವೇಕಾನಂದರ ಸನ್ಯಾಸ ದೀಕ್ಷೆಯ ಪೂರ್ವದ ಹೆಸರು ನರೇಂದ್ರನಾಥ ದತ್ತ, ಎಳೆಯ ವಯಸ್ಸಿನಿಂದಲೂ ತತ್ವಪೂರಿತ ಮಾತು, ಆದರ್ಶದ ಬದುಕಿನಲ್ಲಿಯೇ ಜೀವನವನ್ನು ಕಟ್ಟಿಕೊಳ್ಳುತ್ತಾ ಬೆಳೆದರು. ಇವರು 1863 ಜನವರಿ 12ರಂದು ಕೊಲ್ಕತ್ತಾದಲ್ಲಿ ಜನಿಸಿದರು. ತಂದೆ ವಿಶ್ವನಾಥ ದತ್ತ, ತಾಯಿ ಭುವನೇಶ್ವರಿ ದೇವಿ. ಇವರ ಗುರುಗಳೇ ಶ್ರೀರಾಮಕೃಷ್ಣ ಪರಮಹಂಸರು. ಗುರುಗಳಿಂದ ತತ್ವಗಳನ್ನು ತಿಳಿದು ಬದುಕಿನಲ್ಲಿ ಅಳವಡಿಸಿಕೊಂಡು ಅವರ ಪ್ರಿಯ ಶಿಷ್ಯರಾದರು. ಶ್ರೀ ರಾಮಕೃಷ್ಣರ ಶಿಷ್ಯರಾದ ಮೇಲೆ ನರೇಂದ್ರನಾಥರಿಗೆ ವಿವೇಕಾನಂದ ಎಂಬ ಹೆಸರು ಬಂತು.

ಭಾರತದ ಯುವ ಜನರಲ್ಲಿ ಹೊಸ ಉತ್ಸಾಹವನ್ನು, ಆಧ್ಯಾತ್ಮ ಚಿಂತನೆ ಮತ್ತು ತತ್ವಜ್ಞಾನವನ್ನು ತುಂಬುವ ಸಲುವಾಗಿ ಐದು ವರ್ಷಗಳ ಕಾಲ ನಿರಂತರವಾಗಿ ವಿವೇಕಾನಂದರು ಭಾರತ ಪರ್ಯಟನೆಯನ್ನು ಮಾಡಿದರು. ಭಗವದ್ಗೀತೆಯ ಆದರ್ಶಗಳನ್ನು ಬಹುವಾಗಿ ಮೆಚ್ಚಿದ್ದರು ಮತ್ತು ಅದನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ನಡೆದರು.

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಒಂದು ಆದರ್ಶ ಸಮಾಜವೆಂದರೆ ಬ್ರಾಹ್ಮಣ ಜ್ಞಾನ, ಕ್ಷತ್ರಿಯ ಸಂಸ್ಕೃತಿ, ವೈಶ್ಯ ದಕ್ಷತೆ ಮತ್ತು ಶೂದ್ರರ ಸಮಾನತೆಯ ಮೇಲೆ ನಿಂತಿರುವಂತಹ ಸುಭದ್ರ ಸಮಾಜ ಎಂಬುದಾಗಿದೆ. ದೇಶದ ಭವಿಷ್ಯ ಅಡಗಿರುವುದು ಯುವ ಶಕ್ತಿಯಲ್ಲಿ. ಹಾಗಾಗಿ ಮೊದಲು ಯುವಶಕ್ತಿಯನ್ನು ದೇಶ ಸೇವೆಗಾಗಿ ಹಾಗೂ ಅಭ್ಯುದಯಕ್ಕಾಗಿ ಸಿದ್ಧರಾಗಿಸಬೇಕು. ಆಗಲೇ ಆ ದೇಶದ ಪ್ರಗತಿ ಸಾಧ್ಯ ಎಂಬುದನ್ನು ಬಹುವರ್ಷಗಳ ಹಿಂದೆ ಸಮಾಜಕ್ಕೆ ತಿಳಿ ಹೇಳಿದರು. ದೇಶದಲ್ಲಿದ್ದ ಅಜ್ಞಾನ, ಬಡತನ, ಮೂಢನಂಬಿಕೆ, ಅನಕ್ಷರತೆ, ದ್ವೇಷ, ಕೀಳರಿಮೆ, ನಾಯಕತ್ವದ ಕೊರತೆ ಹೀಗೆ ದೇಶವನ್ನು ಕಾಡುತ್ತಿದ್ದ ನೂರಾರು ಸಮಸ್ಯೆಗಳನ್ನು ಅವರು ಗುರುತಿಸಿ ಅದಕ್ಕೆ ಮಾರ್ಗೋಪಾಯವನ್ನು ವಿವರಿಸಿದರು.

ವಿಶ್ವ ಪರ್ಯಟನೆಯನ್ನು ಮಾಡಿ ತಮ್ಮ ಸಿದ್ಧಾಂತವನ್ನು ಜಗತ್ತಿಗೆ ಸಾರಿ ಹೇಳಿದರು. ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದ ಭಾಷಣದಲ್ಲಿ ಅವರು ಪ್ರತಿಪಾದಿಸಿದ ಹಿಂದೂ ಧರ್ಮದ ಸಿದ್ಧಾಂತಗಳು, ತತ್ವಗಳು ಮತ್ತು ಆದರ್ಶಗಳು ಜಗತ್ತಿನ ಚಿಂತಕರನ್ನು ಆಕರ್ಷಿಸಿದವು. 'ಅಮೇರಿಕಾದ ನನ್ನ ಸಹೋದರ ಸಹೋದರಿಯರೇ...' ಎಂದು ಅವರು ಅಂದು ಹೇಳಿದ ಸಾಲುಗಳು ಇಂದಿಗೂ ಕೂಡ ಇಲ್ಲೇ ಎಲ್ಲೋ ಕೇಳಿಸಿದಂತೆ ಸಂತಸವನ್ನು ಕೊಡುತ್ತಿರುತ್ತದೆ. ಪ್ರಪಂಚವನ್ನೇ ತನ್ನ ಮಾತೃಭೂಮಿ ಎಂದು ತಿಳಿದು ಅಲ್ಲಿರುವ ಎಲ್ಲರೂ ತನ್ನ ಒಡಹುಟ್ಟಿದವರು ಎಂಬ ಅವರ ಅಂದಿನ ಚಿಂತನೆ ಇಂದಿಗೂ ಕೂಡ ಆದರ್ಶಪ್ರಾಯವಾದದ್ದು. ಸ್ವಾಮಿ ವಿವೇಕಾನಂದರ ಕರ್ನಾಟಕದ ನಂಟನ್ನು ರಾಷ್ಟ್ರಕವಿ ಕುವೆಂಪುರವರು ತಮ್ಮ ಗ್ರಂಥ 'ಸ್ವಾಮಿ ವಿವೇಕಾನಂದ'ದಲ್ಲಿ ಬರೆದಿದ್ದಾರೆ. ಬೇಲೂರಿನ ರಾಮಕೃಷ್ಣ ಮಠಕ್ಕೆ ಸ್ವಾಮಿ ವಿವೇಕಾನಂದರು ಆಗಾಗ ಭೇಟಿ ನೀಡುತ್ತಿದ್ದರು.

1892ರ ಅಕ್ಟೋಬರ್‌ನಲ್ಲಿ ಉತ್ತರ ಕರ್ನಾಟಕದ ಬೆಳಗಾವಿಗೆ ಸ್ವಾಮಿ ವಿವೇಕಾನುಂದರು ಆಗಮಿಸಿ ಶ್ರೀ ಸದಾಶಿವ ರಾವ್ ಭಾಟೆಯವರ ಮನೆಯಲ್ಲಿ ಮೂರು ದಿನಗಳ ಕಾಲ ತಂಗಿದ್ದರು. ಭಾರತದ ಅನೇಕ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಜನರೊಂದಿಗೆ ಸಂವಾದ ಮಾಡುತ್ತಿದ್ದರು. ಹೋದ ಕಡೆಗಳಲ್ಲಿ ಆಧ್ಯಾತ್ಮ ಚಿಂತನೆ, ತತ್ವಜ್ಞಾನ, ಮೌಲ್ಯಾಧಾರಿತ ವಿಷಯಗಳನ್ನೇ ಯುವ ಜನತೆ ಮತ್ತು ಜನಸಾಮಾನ್ಯರಿಗೆ ವಿವರಿಸಿ ಹೇಳುತ್ತಿದ್ದರು.

ರಾಮಕೃಷ್ಣ ಮಿಷನ್ ಇಂದು ಇನ್ನೂರಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದೆ. ಭಾರತದ ಹೊರಗೆ ಇಪ್ಪತ್ತಕ್ಕೂ ಹೆಚ್ಚು ದೇಶಗಳಲ್ಲಿ ಸ್ಥಾಪನೆಯಾಗಿದೆ. ಪ್ರತಿ ಕೇಂದ್ರದಲ್ಲೂ ಕೂಡ ವಿವೇಕಾನಂದರ ತತ್ವ ಮತ್ತು ಆದರ್ಶಗಳ ಪರಿಚಯವನ್ನು ಮಾಡಿಸಲಾಗುತ್ತಿದೆ.

ನಮ್ಮಲ್ಲಿರುವ ಅಂಧಕಾರ ಶಕ್ತಿಗಳಾದ ಅಜ್ಞಾನ, ಮೂಢನಂಬಿಕೆ, ಹೊಟ್ಟೆಕಿಚ್ಚು, ದ್ವೇಷ, ಹಿಂಸೆ, ಅಸೂಯೆ, ಜಾತಿ, ಧರ್ಮ, ಪಂಥ, ಮೇಲು, ಕೀಳು, ಹೆಣ್ಣು, ಗಂಡು, ಬಡವ, ಬಲ್ಲಿದ ಎಂಬೆಲ್ಲಾ ವರ್ಗಗಳನ್ನು ತೆಗೆದು ಹಾಕಿ ಸರ್ವಧರ್ಮ ಸಮಾನತೆಯ ಸರ್ವಧರ್ಮ ಗುಣದ ನಾಡನ್ನು ಕಟ್ಟೋಣವೆಂಬ ಶಪಥ ವೀರ ಸನ್ಯಾಸಿಯದಾಗಿತ್ತು. ಅದನ್ನು ನನಸು ಮಾಡಬೇಕಾದ ಕಾರ್ಯ ಯುವಕರದ್ದು ಹಾಗೂ ಸಮಾನ ಮನಸ್ಸಿನ ಪ್ರಜೆಗಳದು. ❍

ಕವನ

## ಗಝಲ್

– ಗಣೇಶ ಪ್ರಸಾದ, ಪಾಂಡೇಲು

ತೆಂಕಣಕೆ ಜಾರುವ ನೇಸರ ನಗುತ
ನೋಡಿದನು ಕುಣಿಸಲೆಂದು ಸಖಿ
ಕಂಕಣದಿ ಸೇರುವ ಕಾಲಕೆ ತಾಗುತ
ಕಾಡಿದನವನು ಹಣಿಸಲೆಂದು ಸಖಿ


ತುಳುಕು ದೋಣಿ ಅಂಬಿಗ ಹೇಳಿದನೇ
ನಾಳೆಗಳು ಬಾರದಿರಿಲ್ಲಿ ನೀವೆನುತಲಿ
ಮುಳುಗಿದ ಘಳಿಗೆಯಲಿ ಮಾಣಿಯು
ಅರಿತನು ಶರಧಿ ಮಣಿಸಲೆಂದು ಸಖಿ

ಎಸೆದಿರಲು ನಯನದ ಬಾಣವನು
ತೂಗಿದ ಒಲವ ಸಮರಕೆ ಜತೆಯಲಿ
ಹೊಸೆಯಲು ಬತ್ತಿ ಭಾವದೆಣ್ಣೆಯಲಿ
ಹಚ್ಚಿದಳು ದೀಪ ತಣಿಸಲೆಂದು ಸಖಿ

ರೂಪವನು ಇಳಿಸುತ ಎದೆಯೊಳಗೆ
ಬಯಕೆಗೆ ತೆರೆದನು ಪ್ರೀತಿಯ ಕ್ಷಣಕೆ
ಧೂಪವನು ಪಸರಿಸುತ ಹದದೊಳಗೆ
ನಡೆದನು ಒಲವು ಉಣಿಸಲೆಂದು ಸಖಿ

ನಕ್ಕವಲ್ಲಿ ತಾರೆಗಳು ರವಿಶಶಿಯಾಟಕೆ
ಪ್ರಸಾದನ ಮೂಡದ ಹೆಜ್ಜೆಯ ಹಾದಿಗೆ
ಸಿಕ್ಕವಲ್ಲಿ ಸರಿಸಾಕ್ಷಿಗಳು ಭರವಸೆಯಲಿ
ಸಾಗಿರಲು ನಲಿದು ದಣಿಸಲೆಂದು ಸಖಿ

❍❍❍


With Best Compliments from
SHRINIVAS
BOARDING & LODGING
Best Wishes From MR. VENUGOPAL L. SHETTY.
SHRINIVAS
BOARDING & LODGING
Super Delux Rooms
Delux Rooms
Semi Delux Rooms
Add. : Balaji Towers, Suratkal, N.H. Junction, Suratkal, Karnataka.
Ph. : 0824 2476633 / 2478833.
Email : shrinivaslodiging@yahoo.com
Website : www.shrinivaslodge.com




20ನೆಯ ವಾರ್ಷಿಕೋತ್ಸವಕ್ಕೆ ಅದ್ದೂರಿಯ ಚಾಲನೆ




ಶ್ರೀ ಚಂದ್ರಹಾಸ ಶೆಟ್ಟಿ ಮತ್ತು ಶ್ರೀಮತಿ ಭಾರತಿ ಶೆಟ್ಟಿ ದಂಪತಿಗೆ ಗೌರವ




ಮುಖ್ಯ ಅತಿಥಿ ಶ್ರೀ ಸದಾಶಿವ ಶೆಟ್ಟಿಯವರಿಗೆ ಸನ್ಮಾನ




ಗೌರವ ಅತಿಥಿ ಡಾ. ಶ್ರೀನಿವಾಸ ಶೆಟ್ಟಿ ದಂಪತಿಗೆ ಸನ್ಮಾನ



ಶ್ರೀ ಸೀತಾರಾಮ ಶೆಟ್ಟಿಯವರಿಗೆ ಗೌರವ




ಶ್ರೀಮತಿ ರೇವತಿ ಸದಾನಂದ ಶೆಟ್ಟಿ ಮತ್ತು ಸದಾನಂದ ಶೆಟ್ಟಿ ದಂಪತಿಗೆ ಸನ್ಮಾನ



ಶ್ರೀ ಆನಂದ ಶೆಟ್ಟಿ ಮತ್ತು ಶ್ರೀಮತಿ ಶಾಲಿನಿ ಶೆಟ್ಟಿ ದಂಪತಿಗೆ ಸನ್ಮಾನ



ಶ್ರೀಮತಿ ಪ್ರಮೋದ ಸುರೇಂದ್ರ ಮಾಡ ಮತ್ತು ಸುರೇಂದ್ರ ಮಾಡ ದಂಪತಿಗೆ ಗೌರವ




20ನೆಯ ವಾರ್ಷಿಕೋತ್ಸವದಲ್ಲಿ ಉತ್ತಮ ಅಂಕಗಳಿಂದ
ಉತ್ತೀರ್ಣರಾದ ಸಿಎ ಮತ್ತು ಎಂಬಿಎ ವಿದ್ಯಾರ್ಥಿಗಳಿಗೆ ಗೌರವ




ಮುಖ್ಯ ಅತಿಥಿಗಳಾಗಿ ಶ್ರೀಮತಿ ಸುಲತಾ ಸತೀಶ್ ಶೆಟ್ಟಿ
(ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಬಂಟ್ಸ್ ಸಂಘ ಪುಣೆ)




ಶ್ರೀಮತಿ ದಯಾಮಣಿ ಸುಧಾಕರ ಶೆಟ್ಟಿ ದಂಪತಿಗೆ ಸನ್ಮಾನ




ಗೌರವ ಅತಿಥಿಗಿ ಡಾ. ವಿದ್ಯಾ ಹಿಮಕರ ಶೆಟ್ಟಿಯವರಿಗೆ ಗೌರವ




ಶ್ರೀಮತಿ ಉಷಾ ಭಾಸ್ಕರ ಶೆಟ್ಟಿ ದಂಪತಿಗೆ ಸನ್ಮಾನ




ವೈವಾಹಿಕ ಜೀವನದ ಸುವರ್ಣ ಮಹೋತ್ಸವವನ್ನು ಆಚರಿಸಿದ ದಂಪತಿ
ಶ್ರೀಮತಿ ಲಲಿತ ಮತ್ತು ಜಯಕರ ಶೆಟ್ಟಿ ದಂಪತಿಯನ್ನು ಗೌರವಿಸಿದಾಗ

# ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿದ ಹುಡುಗ ಈಗ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ

✍ **ಸುರೇಶ್ ಗುದಗನವರ,**
ಸಾಹಿತಿ ರಾಮದುರ್ಗ

ನಯನ ಮನೋಹರ, ಸಾಂಸ್ಕೃತಿಕ ಸೊಬಗಿನ ನಾಡು ಬೆಳಗಾವಿ ಜಿಲ್ಲೆಯಲ್ಲಿ ಅರಳಿದ ಪ್ರತಿಭೆ ಪ್ರೊ.ಚಂದ್ರಶೇಖರ ಅಕ್ಕಿ. ಗೋಕಾಕ ತಾಲೂಕಿನ ಶಿಲ್ಪಿ ಭಾವಿ ಗ್ರಾಮದವರು. ತಾಯಿಯ ತವರೂರಾದ ಖನಗಾಂವಿಯಲ್ಲಿ 1948, ಡಿ. 24 ರಂದು ಜನಿಸಿದರು. ತಂದೆ ದುಂಡಪ್ಪ, ತಾಯಿ ಅಂಬವ್ವ, ಪ್ರತಿಷ್ಠಿತ ಕೃಷಿ ಕುಟುಂಬದಲ್ಲಿ ಬೆಳೆದ ಚಂದ್ರಶೇಖರ ಮುಲ್ಕಿ ಶಿಕ್ಷಣದವರೆಗೆ ಖನಗಾವಿ ಪ್ರಾಥಮಿಕ ಶಾಲೆಯಲ್ಲಿ ಪೂರೈಸಿದರು. 7ನೇ ತರಗತಿ (ಮುಲ್ಕಿ) ಪರೀಕ್ಷೆಯಲ್ಲಿ ಚಿಕ್ಕೋಡಿ ವಲಯಕ್ಕೆ ಮೂರನೆಯ ರ್‍ಯಾಂಕ್ ಗಳಿಸಿ ಎಸ್.ಎ. ಖನಗಾವಿ ಗುರುಗಳಿಂದ ಶಹಬ್ಬಾಸ್ ಎನಿಸಿಕೊಂಡಿದ್ದರು. ನಂತರ ನೇಸರಗಿಯ ಕ್ರಿಶ್ಚಿಯನ್ ಹೈಸ್ಕೂಲ್‌ನಲ್ಲಿ ಎಸ್. ಎಸ್. ಎಲ್. ಸಿ. ಪಾಸಾದರು. ತಂದೆಯವರು ಮಗನನ್ನು ಇಂಜಿನಿಯರ್ ಮಾಡಬೇಕೆನ್ನುವ ಮಹತ್ವಾಕಾಂಕ್ಷೆಯಿಂದ ಬೆಳಗಾವಿಯ ಆರ್.ಎಲ್. ಎಸ್. ಕಾಲೇಜಿಗೆ ಸೇರಿಸಿದರು. ಸ್ವಭಾವತಃ ಚಂದ್ರಶೇಖರ್‌ಗೆ ಕನ್ನಡ, ಇತಿಹಾಸ ಭಾಷೆಗಳ ಬಗ್ಗೆ ಅಪಾರ ಆಸಕ್ತಿಯಿತ್ತು. ಅವರು ವಿಜ್ಞಾನ ತರಗತಿಗಳಿಗೆ ಒಗ್ಗಿಕೊಳ್ಳದೆ ಪಿಯುಸಿಯಲ್ಲಿ ಅನುತ್ತೀರ್ಣರಾಗಿ ಮನೆಗೆ ಮರಳಿದರು.

ಚಂದ್ರಶೇಖರರ ತಂದೆಯರಿಗೆ ದಿಕ್ಕೇ ತೋಚದಂತಾಯಿತು. ಅವರು ಗೋಕಾಕದ ಆಗಿನ ಪ್ರಸಿದ್ಧ ಜವಳಿ ವ್ಯಾಪಾರಸ್ಥರಾದ ಗಂಗಪ್ಪ ಶೇಬಣ್ಣವರ ಅವರಲ್ಲಿಗೆ ಬಂದು ಚಂದ್ರಶೇಖರರನ್ನು ಅಂಗಡಿಯಲ್ಲಿಟ್ಟುಕೊಂಡು ವ್ಯಾಪಾರದ ಮಾಹಿತಿ ನೀಡಲು ವಿನಂತಿಸಿಕೊಂಡರು. ಹೀಗಾಗಿ ಚಂದ್ರಶೇಖರ ಅವರು ಶೇಬಣ್ಣವರ ಅವರ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡತೊಡಗಿದರು. ಮಾಲಕರು ಚಂದ್ರಶೇಖರ ಕಲಿಕೆ ಆಸಕ್ತಿಯನ್ನು ಗಮನಿಸಿ 1968ರಲ್ಲಿ ಗೋಕಾಕದ ಜೆಎಸ್‌ಎಸ್‌ನಲ್ಲಿ ಕಾಲೇಜಿನಲ್ಲಿ ಕಲಾ ವಿಭಾಗಕ್ಕೆ ಸೇರಿಸಿದರು. ಮುಂಜಾನೆ ಕಾಲೇಜಿಗೆ ಹೋಗಿ ಬಂದು ಮಧ್ಯಾಹ್ನ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡತೊಡಗಿದರು. ಚಂದ್ರಶೇಖರ ಅತ್ಯುತ್ತಮ ಅಂಕಗಳೊಂದಿಗೆ ಪಿಯುಸಿ ತೇರ್ಗಡೆಯಾದರು.

ಮಗನ ಯಶಸ್ಸನ್ನು ಕಂಡು ತಂದೆಯವರು ಬಟ್ಟೆ ಅಂಗಡಿಯಿಂದ ಬಿಡಿಸಿ ಬಿಎ ಪದವಿಗೆ ಸೇರಿಸಿದರು. ಡಾ. ಎಸ್. ಬಿ. ತೋಟದ, ಪ್ರೊ. ಬಿ. ಜಿ. ಯರಗಂಬಳಿಮಠ ಗುರುಗಳ ಮಾರ್ಗದರ್ಶನದಲ್ಲಿ ಬಿ.ಎ. ಪದವಿ ಪೂರೈಸಿದರು. ನಂತರ ಎಂ.ಎ. ಅಧ್ಯಯನಕ್ಕಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದರು. ಚಂದ್ರಶೇಖರರು ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ, ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಬಿ. ಕೊಟ್ರ ಶೆಟ್ಟಿ, ಡಾ. ಸೋಮಶೇಖರ ಇಮ್ರಾಪುರ ಮಾರ್ಗದರ್ಶನದಲ್ಲಿ 1974ರಲ್ಲಿ ಎಂ.ಎ. ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದರು. ಗೋಕಾಕದ ಋಣಾನುಬಂಧವೋ ಏನೋ ಚಂದ್ರಶೇಖರ ಅಕ್ಕಿಯವರು 1974ರಲ್ಲಿ ಜೆಎಸ್‌ಎಸ್ ಕಾಲೇಜಿನಲ್ಲಿ ಗೌರವ ಉಪನ್ಯಾಸಕರಾಗಿ ಸೇವೆ ಪ್ರಾರಂಭಿಸಿದರು. ಅಂದಿನ ಆಡಳಿತ ಮಂಡಳಿ ಮೆಚ್ಚುಗೆ ಪ್ರೀತಿ ಗಳಿಸಿದ ಅವರು 1975ರಲ್ಲಿ ತಾವು ಕಲಿತ ಕಾಲೇಜಿನಲ್ಲಿಯೇ ಪೂರ್ಣಾವಧಿ ಉಪನ್ಯಾಸಕರಾಗಿ ನೇಮಕಗೊಂಡರು. 2006 ಜೂನ್ 1ರಂದು ನಿವೃತ್ತಿ ಹೊಂದಿದರು. ಪ್ರೊ. ಚಂದ್ರಶೇಖರ ಅಕ್ಕಿ ಬಿಎ ಮುಗಿಸಿದ ತಕ್ಷಣವೇ ಮನೆಯ ಹಿರಿಯರೆಲ್ಲ ಸೇರಿ ಮದುವೆಗೆ ಒತ್ತಾಯಿಸಿದರು. ಜುಲೈ 7, 1972ರಲ್ಲಿ ಅವರ ಸೋದರ ಮಾವಂದಿರ ಮಗಳು ಸುಶೀಲಾ ಅವರನ್ನು ಶಿಲ್ಪಿ ಭಾವಿಯಲ್ಲಿ ಮದುವೆಯಾದರು. ಕವಿತಾ, ಅರುಣ ಮತ್ತು ಕಿರಣ ಎಂಬ ಮೂವರು ಮಕ್ಕಳಿದ್ದಾರೆ.

ಪ್ರೊ. ಚಂದ್ರಶೇಖರ ಅಕ್ಕಿ ಅವರು ಕಥೆ, ವ್ಯಕ್ತಿಚಿತ್ರಣ, ವಿಮರ್ಶೆ, ಸಂಪಾದನೆ ಮೊದಲಾದ ಪ್ರಕಾರಗಳಲ್ಲಿ ತೊಡಗಿಸಿಕೊಂಡು ಕನ್ನಡ ಸಾಹಿತ್ಯ ಕ್ಷೇತ್ರ ಸಮೃದ್ಧಿಗೊಳಿಸಿದ್ದಾರೆ. ಪಿಯುಸಿ ಓದುತ್ತಿರುವಾಗಲೇ 'ಬೆಂದಾತ್ಮದ ಕೂಗು' ಕವಿತೆ

ಮತ್ತು 'ಎಪ್ರಿಲ್ ಫೂಲ್' ಕಥೆಯನ್ನು ಕಾಲೇಜು ಮ್ಯಾಗಜಿನ್‌ಗೆ ಕೊಟ್ಟಿದ್ದರು. ಕಸಿ, ಪರಿಸರ, ನಮ್ಮ ನಿಮ್ಮ ಕಥೆಗಳು (ಕಥಾ ಸಂಕಲನಗಳು), ಗೋಕಾವಿ ಸಿರಿ ಸಂಪದ, ಗೋಕಾವಿ ಸಂಸ್ಕೃತಿ ಸಂಪದ, ಗೋಕಾವಿ ನಾಡಿನ ಹೊನ್ನಬೆಳೆ, ಪ್ರಸಿದ್ಧ ಸಂಸದೀಯ ಪಟು ಎ. ಆರ್. ಪಂಚಗಾವಿ, ಎಂ. ಬಿ. ಮುನ್ನವಳ್ಳಿ (ವ್ಯಕ್ತಿಚಿತ್ರಣ), ಕಥಾ ತರಂಗ, ಗಡಿನಾಡ ಬೆಡಗು, ಬಸವರಾಜ ಕಟ್ಟಿಮನಿಯವರ ಸಮಗ್ರ ಸಾಹಿತ್ಯ 15 ಸಂಪುಟಗಳು, ಬಸವರಾಜ ಕಟ್ಟಿಮನಿ ಕಥೆಗಳು: ಅವಲೋಕನ, ಬಸವರಾಜ ಕಟ್ಟಿಮನಿ ವ್ಯಾಸಂಗ, ಗಡಿನಾಡ ಬೆಡಗು, ಬೆಳಗಾವಿ ಬೆಳಕು, ಹಾಲುಬಾನ, ದರ್ಪಣ ಮುಂತಾದ ಮೌಲಿಕ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಸಮರ್ಪಿಸಿದ್ದಾರೆ. ಒಂದು ಹಗ್ಗದ ಸುತ್ತ (ಕಾದಂಬರಿ), ಓಕುಳಿ (ಕಥಾ ಸಂಕಲನ) ಹಾಗೂ ಆಗೀಗ ಬರೆದ ಕವಿತೆಗಳು (ಕವನ ಸಂಕಲನ) ಅಪ್ರಕಟಿತ ಕೃತಿಗಳಾಗಿವೆ.

ಗೋಕಾವಿ ನಾಡಿನ ಹಲವಾರು ಸಂಘ-ಸಂಸ್ಥೆಗಳೊಂದಿಗೆ ನಿಕಟ ಸಂಬಂಧ ಇಟ್ಟುಕೊಂಡಿದ್ದಾರೆ. ಕನ್ನಡ ನಾಡು ನುಡಿ ಬಗ್ಗೆ ಅವರಿಗಿರುವ ಅಭಿಮಾನ, ಕಾಳಜಿ ಅಗಾಧವಾದದ್ದು. ಶರಣ ಚಿಂತನೆ, ಅಧ್ಯಯನವನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡಿದ್ದಾರೆ. ಧಾರವಾಡದ ಮುರುಘಾ ಮಠ, ಹುಬ್ಬಳ್ಳಿ ಮೂರು ಸಾವಿರ ಮಠ, ಸಾವಳಗಿ ಮಠ, ಇಳಕಲ್ ಮಠ, ಅರಂಭಾವಿ ಮಠ, ತವಗ ಮಠ, ಗೋಕಾಕ ಸಂಪಾದನಾ ಮಠಗಳಿಂದ ಹಾಗೂ ನಾಡಿನ ವಿವಿಧ ಸಂಘ ಸಂಸ್ಥೆಗಳ ಪ್ರಶಸ್ತಿ ಪುರಸ್ಕಾರಗಳಿಗೆ ಅವರು ಭಾಜನರಾಗಿದ್ದಾರೆ. ಅವರಿಗೆ 'ಸಿರಿಗಂಧ' ಹಾಗೂ 'ಸಹೃದಯಿ' ಅಭಿನಂದನ ಗ್ರಂಥಗಳು ಸಮರ್ಪಿತಗೊಂಡಿದೆ. ದೂರದರ್ಶನ ಚಂದನ ವಾಹಿನಿಯ 'ಬೆಳಗು' ಕಾರ್ಯಕ್ರಮದ ಗೌರವವು ಅವರಿಗೆ ಸಂದಿದೆ. ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಮಂಗಳಾ ಮೆಟಗುಡ್ಡ ಅವರು ಸಾಹಿತ್ಯಿಕ ಬಳಗದೊಂದಿಗೆ ಪ್ರೊ. ಚಂದ್ರಶೇಖರ ಅಕ್ಕಿ ಅವರನ್ನು ನ. 23, 24ರಂದು ಮೂಡಲಗಿಯಲ್ಲಿ ಜರುಗಲಿರುವ ಬೆಳಗಾವಿ ಜಿಲ್ಲಾ ಹದಿನಾರನೆಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ನಿಯೋಜಿಸಿರುವುದು ಹೆಮ್ಮೆಯ ಸಂಗತಿ. 76ರ ಹರೆಯದ ಕನ್ನಡದ ಕಟ್ಟಾಳು ಪ್ರೊ. ಚಂದ್ರಶೇಖರ ಅಕ್ಕಿ ನಮ್ಮೆಲ್ಲರಿಗೂ ಆದರ್ಶಪ್ರಿಯ. ಅವರ ಸರಳ ನಡೆ-ನುಡಿ, ಹಿರಿಯ-ಕಿರಿಯರೆನ್ನದೆ ಎಲ್ಲರೊಂದಿಗೆ ಪ್ರೀತಿಯಿಂದ ಬೆರೆಯುವ, ಪ್ರತಿಕ್ರಿಯಿಸುವ ಮನೋಭಾವ ಅಪ್ಯಾಯಮಾನವಾದುದು. ಅವರ ಬದುಕು-ಬರಹ ನಮಗೆಲ್ಲ ಸ್ಫೂರ್ತಿದಾಯಕವಾಗಲಿ. ❍

ಕವನ

## ಇಟ್ಟಂಗೆ ಇರಬೇಕು

– ಜಿ. ಟಿ. ಆರ್. ದುರ್ಗ
ಜಿ. ಎಚ್. ಎಲ್, ಬಂಗಾರಪೇಟೆ

ಇಟ್ಟಂಗೆ ಇರಬೇಕು ಬಾಳಿನಾಗೆ
ಆ ಶಿವನು ಹೇಳಿದಂಗೆ
ಅವನು ಕೇಳಿದಂಗೆ
ನಾವು ಇಟ್ಟಂಗೆ ಇರಬೇಕು ಭೂಮಿ ಮೇಗೆ

ಎಲ್ಲಾದು ಕೊಟ್ಟ ನಮ್ಮ ಪರಮ ಶಿವ
ಎಲ್ಲರಿಗೂ ಕಣ್ಣು ಕೊಟ್ಟ ಮಹಾ ಶಿವ
ಕೆಟ್ಟದ್ದನ್ನು ನೋಡಬೇಡ ಕೆಟ್ಟದನ್ನು ಕಾಣಬೇಡ
ಕಟ್ಟಿ ಕೊಟ್ಟಿರುವ ಈ ದೇಹವನ್ನು

ಕೈಯಿ ಕಾಲು ಕೊಟ್ಟ ನಮಗೆ ದುಡಿಯಲೆಂದು
ಬಾಯಿ ಮೂಗು ಕೊಟ್ಟ ರುಚಿ ವಾಸನೆ ಮಾಡಲೆಂದು
ಕಿವಿ ಕೊಟ್ಟು ಕೇಳಬೇಕು ಒಳಿತು ಮಾಡಲೆಂದು
ಜೀವ ಉಳಿಯಲು ಕೊಟ್ಟ ಹೃದಯ ಮಿಡಿತವನ್ನು

ಕೋಟೆಯಂತೆ ಕಟ್ಟಿರುವ ಚರ್ಮವನ್ನು
ದೇಹ ರಕ್ಷಣೆಗೆ ಕೊಟ್ಟಿರುವ ಬೆನ್ನು ಮೂಳೆಗಳನ್ನು
ಬದುಕಿನ ಬಾಳಿಗೆ ಕೊಟ್ಟ ಮನಸ್ಸು ಸ್ಪರ್ಶವನ್ನು
ಈ ದೇಹವೆ ಶಿವನ ಕೊಟ್ಟ ಮಾಂಸದ ದೇಹವನ್ನು

❍❍❍

# ಕೊಟ್ಟವ ಕೋಡಂಗಿ ಇಸ್ಕೊಂಡವ ಈರಭದ್ರ

✍ ಡಾ. ಪ್ರದೀಪ್ ಕುಮಾರ್ ಹೆಬ್ರಿ

'ಬದುಕು' ಎಂದರೆ ಭಗವಂತನಾಡಿಸುವ ಆಟ. ಸೋಲು, ಗೆಲುವು ಸಹಜ. ಗೆದ್ದವರು ಬೀಗಬೇಕೆಂದಿಲ್ಲ. ಸೋತವರು ಸಂಕಟಪಡಬೇಕೆಂದಿಲ್ಲ. ಇಂದಿನ ಜಗತ್ತೇ ವ್ಯಾವಹಾರಿಕ ಆಗಿರುವಾಗ 'ನಿನಗೆ ನೀಡುತ್ತೇನೆ' ಎಂದು ತಿಳಿಸಿ ಪಡೆವವರು ಹೆಚ್ಚಿರುವಾಗ, ರಾಜಕಾರಣಿಯೋ, ಪ್ರಜಾದ್ರೋಹಿಯೋ, ಮಂತ್ರಿಯೋ, ಕಂತ್ರಿಯೋ, ದಾನಿಯೋ, ದಾಸನೋ, ಸ್ವಾಮಿಯೋ, ಶಿಕ್ಷಕನೋ, ಭಕ್ಷಕನೋ, ಲೇಖಕನೋ, ಲೆಕ್ಕಿಗನೋ, ನಟನೋ, ತಮ್ಮ ಯೋಗಕ್ಷೇಮಕ್ಕೆ ಮೊದಲ ಆದ್ಯತೆ ನೀಡುವರೆಂಬುದು ಸಾರ್ವಕಾಲಿಕ ಸತ್ಯದ ಕಹಿ ವಿಷಯ. ಹಿಡಿಯುವಂತಿಲ್ಲ, ಬಿಡುವಂತಿಲ್ಲ. ಹಿಡಿದರೆ ಹೊಡೆತ, ಬಿಟ್ಟರೆ ನಷ್ಟ, ಇದ್ದದ್ದು ಹೋಗುವುದೋ ಇರದುದು ಬರುವುದೋ ಬಲ್ಲವರಾರು?

ಕೆಲಸ ಸಿಗಬೇಕಾದರೆ ಹಣ ಕೊಡಬೇಕು. ಕೊಟ್ಟದ್ದು ಪಡೆಯಬೇಕಾದರೆ ಸಂಬಳದೊಡನೆ ಇನ್ನಿತರ ಆದಾಯದ ಅರಿವೂ ಇರಬೇಕು, ಕೊಟ್ಟದ್ದು ತನ್ನದಲ್ಲ, ಬರುವುದೂ ತನಗಲ್ಲ. ಯಾರಿಗೆ ಯಾರೋ? ನನಗಾರಿಹರೋ? ಎಂಬುದೇ ಸದಾ ಕಾಡುವ ಪ್ರಶ್ನೆ ಆಗಿಯೇ ಕಂಗೆಡಿಸುವುದಂತೂ ಖಚಿತ. ತಾವು ಮಹಾ ಸಂಭಾವಿತರೆಂದು ಪ್ರದರ್ಶನಕ್ಕೆ ಮುಂದಾಗುವವರೆಲ್ಲರೂ ಸಾತ್ವಿಕ ದರೋಡೆಕೋರರಂತೆ ಆಗಿರುವುದೇ ಸಮಕಾಲೀನ ವಿಶೇಷ. ದೋಚುವುದು, ಬಾಚುವುದು ಮತ್ತು ಗೀಚುವುದು ವಿನಹ ಯಾರಿಗೇನೂ ಬೇಕಾಗಿಲ್ಲ. ಸ್ಪಂದನೆಯೇ ವ್ಯವಹಾರವಾಗಿದೆ. ಹಾಗಾಗಿಯೇ ಕೊಟ್ಟವ ಕೋಡಂಗಿ, ಇಸ್ಕೊಂಡವ ಈರಭದ್ರ' ಎಂಬುದು.

ನಾವು ಸ್ಪರ್ಧೆಗೆ ಸದಾ ಸಿದ್ಧರಿರಲೇಬೇಕು. ಆದರೆ ಸ್ಪರ್ಧೆಯ ಆಂತರ್ಯ ? ದೂರದರ್ಶನದಲ್ಲಿ ಬಣ್ಣಬಣ್ಣದ ಬಗೆಬಗೆಯ ತಮ್ಮ ನಿಲುವನ್ನರಹುವ ಮಾತುಗಳ ಆಡುವ ಹೀ (ಜೀ) ರೋಗಳು ಎಷ್ಟು ಯೋಗ್ಯರೆಂಬುದು ಮನವ ಕಾಡುವ ಉತ್ತರವಿರದ ಪ್ರಶ್ನೆಯೇ ಆಗಿದೆ. ಮೊದಲು ಒಂದಷ್ಟು ಪ್ರಾಮಾಣಿಕರನ್ನು ಗುರುತಿಸಬಹುದಿತ್ತು. ಇವರೆಲ್ಲರೂ ವ್ಯವಹಾರ ಕುಶಲಿಗಳಾಗಿದ್ದಾರೆ. ಪ್ರಾಮಾಣಿಕತನ ಪ್ರಾಣವನ್ನು ಹೀರುವ ಗುಣ ಎಂದು ತಿಳಿದವರಂತಿದ್ದಾರೆ. ಪ್ರಭುದೇವರ ಮಾತು ನೆನಪಾಗುತ್ತದೆ. 'ಹಸಿವು ತೃಷೆ ವಿಷಯ ವ್ಯಸನ ಈ ನಾಲ್ಕು ಉಳ್ಳವರು ಗುಹೇಶ್ವರ ಲಿಂಗದಲ್ಲಿ ಐಕ್ಯರಂತೆಪ್ಪರೋ?'

ಇಂದು ವಿದ್ಯೆ, ಅರ್ಹತೆ, ಜ್ಞಾನ... ಎಷ್ಟೇ ಉನ್ನತವಾಗಿರಲಿ, ಕೆಲಸ ಪಡೆಯಬೇಕಾದರೆ ಗಂಟೊಂದನ್ನು ಸಿದ್ಧಪಡಿಸಿ ಇಟ್ಟಿರಲೇಬೇಕು. ಹಸಿಮಾಂಸ ಕಂಡಂತೆ ಜೊಲ್ಲು ಸುರಿಸುವ ಬೀದಿನಾಯಿಗಳು ಊರೂರಲ್ಲಿ ಸುತ್ತುತ್ತಿರುವಾಗ, ಈ ಬಯಕೆಯ ಮನುಷ್ಯ ಪ್ರಾಣಿಗಳೇನೂ ಕಡಿಮೆ ಸಂಖ್ಯೆಯಲ್ಲಿಲ್ಲ. 'ನಿನಗೇನು ಬೇಕು ಹೇಳು. ನನಗೆಷ್ಟು ಕೊಡುವಿ ತಿಳಿಸು' ಎಂಬುದೇ ಎಲ್ಲರೆದೆ ಮಿಡಿತವಾಗಿರುವಾಗ 'ಹೂ ಮಿಡಿಯ ಹರಿದು ಒತ್ತಿ / ಹಣ್ಣ ಮಾಡಿಹೆನೆಂದಡೆ ಹಣ್ಣಾಗಬಲ್ಲುದೆ? ಪರಿಮಳವಿಲ್ಲದ ನನೆಯನರಳಿಸಿ ಮುಡಿದಹೆನೆಂದಡೆ ಸೌರಭ ಉಂಟೇ?' ಎಂಬುದು ನೆನೆಯಲೇ ಬೇಕು. 'ಯಾರಿಗೆ ಯಾರು ನನಗಿನ್ನಾರು' ಎಂಬುದು ಅನವರತ ಕಾಡುವ ಕೋಟಿಯ ಪ್ರಶ್ನೆಯಾಗಿದೆ.

ನಾವು ಆದರ್ಶತನವನ್ನು ಮೈಗೂಡಿಸಿಕೊಂಡರೆ ಈ ಜಗತ್ತಿನಲ್ಲಿ ಗೆದ್ದು ಬಾಳಲು ಸಾಧ್ಯವೇ? ಯಾರಿಗೆ ಯಾರ ಬಗ್ಗೆಯೂ ಪ್ರೀತಿ, ಕರುಣೆ ಎಂಬುದಿಲ್ಲ. ಇರುವುದು ನನಗೆಷ್ಟು ಸಿಕ್ಕೀತು, ನನಗೇನು ಸಿಕ್ಕೀತು? ಎಂಬ ಬಯಕೆ ಮಾತ್ರ. ಬದುಕೆಂಬುದು ಸೋಲು ಗೆಲುವುಗಳ ಆಟ. ನಮ್ಮ ಚಿಂತನೆ ಜೀವನದ ಒಳಗುಟ್ಟನ್ನು ಎದುರಿಸಬೇಕಾಗಿರುವ ಸವಾಲು, ವೈರುಧ್ಯಗಳನ್ನು ಎದುರಿಸುವಲ್ಲೇ ಇರಬೇಕು. 'ಲಕ್ಷ' ಅಲ್ಪವಾಗಿರುವಾಗ 'ಕೋಟಿ' ಕಠೋರತನಕ್ಕೆ ಸಾಕ್ಷಿ ಆಗಿರುವಾಗ ಮಾನವನ ಬದುಕಿನಾಟದ ವಿಸ್ಮಯ ಕಂಗೆಡಿಸುತ್ತಿದೆ. ಇದನ್ನು ಗೆದ್ದು ಮುಂದೆ ಬಂದರೆ ಬದುಕಾಗ ಬೆಳ್ದೀಪವಾಗಿ ಬೆಳಗುತ್ತದೆ. ಬೆಳೆಯೋಣ, ಬೆಳಗೋಣ, ಬಾಳಿನಾನಂದ ಕಾಣೋಣ. ❍

# ಭಾರತೀಯ ಚಿತ್ರರಂಗದ ಮೊದಲ ರಾಣಿ

✍ ಕಿರಣ್ ಉಪಾಧ್ಯಾಯ, ಬಹ್ರೈನ್

***ಸಿನಿಮಾದಲ್ಲಿ ಪುರುಷರೇ ಮಹಿಳೆಯರ ಪಾತ್ರವನ್ನೂ ನಿಭಾಯಿಸುತ್ತಿದ್ದ ಕಾಲ ಅದು. ಕಾರಣ, ಮಹಿಳೆಯರು ಚಿತ್ರರಂಗದಲ್ಲಿ ಕೆಲಸ ಮಾಡಿದರೆ ಸಮಾಜದ ಕೆಂಗಣ್ಣಿಗೆ ಗುರಿಯಾಗಬೇಕಾಗಿತ್ತು. ಅಂಥಕಾಲದಲ್ಲಿ ದೇವಿಕಾ ಚಿತ್ರರಂಗ ಪ್ರವೇಶಿಸಿದ್ದಳು. ಕೇವಲ ಅಭಿನಯಕ್ಕಷ್ಟೇ ಸೀಮಿತವಾಗದೆ, ಚಿತ್ರ ನಿರ್ಮಾಣಕ್ಕೂ ಕೈ ಹಾಕಿದ್ದಳು.***

ನೀವು ಇಂಟರ್‌ನೆಟ್‌ನಲ್ಲಿ ದಿ ಲಾಂಗೆಸ್ಟ್ ಕಿಸ್ ಎಂದು ಹುಡುಕಿದರೆ ಮೊದಲು ಕಾಣುವುದು ಪ್ರೇಮಿಗಳ ದಿನಾಚರಣೆಯ ಸಂದರ್ಭದಲ್ಲಿ ಸುದೀರ್ಘವಾಗಿ ಚುಂಬಿಸಿದ ಜೋಡಿಯ ವಿಷಯ. ಥಾಯ್ಲೆಂಡ್‌ನ ಎಕ್ಕಚಾಯ್ಮತ್ತು ಲಕ್ಷಣಾತಿರನರದ ದಂಪತಿ ಐವತ್ತೆಂಟು ಗಂಟೆ ಮೂವತ್ತೈದು ನಿಮಿಷ ಐವತ್ತೆಂಟು ಸೆಕೆಂಡುಗಳವರೆಗೆ ಸುದೀರ್ಘವಾಗಿ ಚುಂಬಿಸಿದರಂತೆ. ಆ ಸ್ಪರ್ಧೆಯ ಅಂತಿಮ ಹಂತದಲ್ಲಿ ಒಟ್ಟು ಒಂಭತ್ತು ಜೋಡಿಗಳು ಪಾಲ್ಗೊಂಡಿದ್ದರಂತೆ. ಅದರಲ್ಲಿ ಜಯ ಗಳಿಸಿ ಗಿನ್ನಿಸ್ ದಾಖಲೆ ನಿರ್ಮಿಸಿದವರು ತಿರನರತ್ಸೋಡಿ.

ವಿಷಯ ಏನೆಂದರೆ ಲೇಖಕಿ ಈಶ್ವರ್ ದೇಸಾಯಿ 'ದಿ ಲಾಂಗೆಸ್ಟ್ ಕಿಸ್ - ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ದೇವಿಕಾ ರಾಣಿ' ಎಂಬ ಒಂದು ಪುಸ್ತಕ ಬರೆದಿದ್ದಾರೆ. ಈ ಹೆಸರಿನ ಒಂದು ಪುಸ್ತಕವಿದೆ. ಓದಲು ಯೋಗ್ಯವಾಗಿದೆ ಎಂಬ ಮಿತ್ರರೊಬ್ಬರ ಸಲಹೆಯ ಮೇರೆಗೆ ಅಮೆಜಾನ್‌ನಿಂದ ಪುಸ್ತಕ ತರಿಸಿಕೊಳ್ಳಬೇಕೆಂದು ಹುಡುಕುತ್ತಿರುವಾಗ ಇದು ಕಂಡದ್ದೇ ವಿನಾ ಅದೇ ಪ್ರಮುಖ ವಿಷಯವಲ್ಲ. ಇರಲಿ, ದೇಸಾಯಿ ಬರೆದ ಈ ಪುಸ್ತಕದ ಕಥಾನಾಯಕಿ ದೇವಿಕಾ ರಾಣಿ. ಈಕೆ ಮೂವತ್ತು ಮತ್ತು ನಲವತ್ತರ ದಶಕದಲ್ಲಿ ಹಿಂದಿ ಚಿತ್ರರಂಗವನ್ನು ಅಕ್ಷರಶಃ ಆಳಿದ ಮಹಾರಾಣಿಯೂ ಹೌದು.

ಹಿಂದಿ ಚಿತ್ರರಂಗದಲ್ಲಿ ಇಂದು ಸಾಕಷ್ಟು ಹೆಸರು ಮಾಡಿದ ಅಭಿನೇತ್ರಿಯರಿದ್ದಾರೆ. ಅವರ ನಡುವೆ ಈ ದೇವಿಕಾ ರಾಣಿ ಯಾರು ಎಂದು ಕೇಳಿದರೆ ಇಂದಿನ ಯುವ ಪೀಳಿಗೆಗಂತೂ ಖಂಡಿತ ಗೊತ್ತಿರಲಿಕ್ಕಿಲ್ಲ. ಅದೇ ಮೂವತ್ತು, ನಲವತ್ತರ ದಶಕದ ಹಿಂದಿ ಸಿನಿಮಾ ನೋಡಿದವರಲ್ಲಿ ಈ ಹೆಸರು ಕೇಳಿದರೆ ಅವರ ಇಳಿವಯಸ್ಸಿನಲ್ಲೂ ಒಮ್ಮೆ ಮಿಂಚಿನ ಸಂಚಾರವಾಗುತ್ತದೆ. ಹಿಂದಿ ಚಿತ್ರರಂಗದ ಡ್ರೀಮ್ ಗರ್ಲ್ ಎಂದರೆ ಹೇಮಾಮಾಲಿನಿ ಎನ್ನುವವರೇ ಹೆಚ್ಚು. ಆದರೆ, ಹೇಮಮಾಲಿನಿ ಎರಡನೆಯ ಡ್ರೀಮ್ ಗರ್ಲ್. ಅದಕ್ಕೂ ಕೆಲವು ದಶಕಗಳ ಹಿಂದೆಯೇ ಬಾಲಿವುಡ್‌ನ ಮೊದಲ ಡ್ರೀಮ್ ಆಗಿ ಮೆರೆದವಳು ದೇವಿಕಾ ರಾಣಿ.

ನಮ್ಮ ತಲೆಮಾರಿನವರು ಆಕೆಯ ಚಿತ್ರಗಳನ್ನು ಹೆಚ್ಚು ನೋಡೇ ಇಲ್ಲ ಎಂದರೂ ತಪ್ಪಿಲ್ಲ. ಅದಕ್ಕೆ ನಾನೂ ಹೊರತಲ್ಲ. ಎಂಬತ್ತರ ದಶಕದಲ್ಲಿ ದೂರದರ್ಶನದಲ್ಲಿ ಜನಪ್ರಿಯ ಕಾರ್ಯಕ್ರಮ ಚಿತ್ರಹಾರ್ ಬರುತ್ತಿತ್ತು. ಅದರಲ್ಲಿ 'ಮೈ ಬನ ಕಿಚಿಡಿಯಾ ಬನ್‌ಕೆ ಬನ್ ಬನ್ ಬೋಲೂರೆ' ಒಂದು ಖಾಯಂ ಹಾಡು. ಬಣ್ಣದ ಟಿವಿಯಲ್ಲಿ ಏನಿಲ್ಲವಾದರೂ ಒಂದು ನೂರು ಸಲವಾದರೂ ಆ ಕಪ್ಪು ಬಿಳುಪಿನ ಹಾಡು ನೋಡಿದ ನೆನಪು. ಅದನ್ನೂ ಅಶೋಕ ಕುಮಾರ್ ಆಗಿ ಸಹಿಸಿಕೊಂಡಿದ್ದೇ ಶಿವಾಯ್ ಜತೆಗಿರುವ ನಾಯಕಿ ಯಾರೆಂದು ಒಮ್ಮೆಯೂ ತಲೆಕೆಡಿಸಿಕೊಂಡಿರಲಿಲ್ಲ. ದೇವಿಕಾ ರಾಣಿ ಅಭಿನಯಿಸಿದ ಅಚೂತ್ ಕನ್ಯಾ ಮತ್ತು ಅಂಜಾನಿ ಬಿಟ್ಟು ಇನ್ಯಾವ ಚಿತ್ರವನ್ನೂ ನೋಡಿಲ್ಲ. ಆ ಎರಡು ಸಿನಿಮಾ ನೋಡಿದ್ದೂ ನಟ ಅಶೋಕ್ ಮಾಡಿದ್ದಾನೆಂಬ ಕಾರಣಕ್ಕಾಗಿಯೇ ಹೊರತು ದೇವಿಕಾ ಇದ್ದಾಳೆಂಬ ಕಾರಣಕ್ಕಾಗಿ ಅಲ್ಲ.

ಏಕೆಂದರೆ ಆಗ ಆಕೆಯ ಕುರಿತಾಗಲಿ, ಆಕೆಯ ಸಾಹಸದ ಕುರಿತಾಗಲಿ ತಿಳಿದಿರಲಿಲ್ಲ. ಮಹಿಳೆಯರು ಚಿತ್ರರಂಗದಲ್ಲಿ ಕೆಲಸ ಮಾಡಿದರೆ ಸಮಾಜದ ಕೆಂಗಣ್ಣಿಗೆ ಗುರಿಯಾಗಬೇಕಾಗಿತ್ತು. ಅಂಥ ಕಾಲದಲ್ಲಿ ದೇವಿಕಾ ಚಿತ್ರರಂಗ ಪ್ರವೇಶಿಸಿದ್ದಳು. ಕೇವಲ ಅಭಿನಯಕ್ಕಷ್ಟೇ ಸೀಮಿತವಾಗದೆ ಚಿತ್ರ ನಿರ್ಮಾಣಕ್ಕೂ ಕೈಹಾಕಿದ್ದಳು. ಇಂದು ಅಶೋಕ್ ಕುಮಾರ್, ದಿಲೀಪ್ ಕುಮಾರ್‌ರಂತಹ ನಟರು ಹೆಸರು ಮಾಡಿದ್ದರೆ ಅದಕ್ಕೆ ದೇವಿಕಾ ರಾಣಿಯೂ ಕಾರಣ ಎನ್ನುವುದನ್ನು ಮರೆಯುವಂತಿಲ್ಲ.

ಅವಳು ಹುಟ್ಟಿದ ಪರಿವಾರ, ಪರಿಸರ ಇದಕ್ಕೆಲ್ಲ ಕಾರಣ ಎನ್ನುವುದನ್ನೂ ಅಲ್ಲಗಳೆಯುವಂತಿಲ್ಲ. ದೇವಿಕಾ ಹುಟ್ಟಿದ್ದು 1908ರ ಮಾರ್ಚ್ 30ರಂದು ವಲ್ಟೈರ್ (ಈಗಿನ ವಿಶಾಖಪಟ್ಟಣಂ)ನಲ್ಲಿ. ಆಕೆ ನಮ್ಮ ರಾಷ್ಟ್ರಗೀತೆ ಬರೆದ ಕವಿ ರವೀಂದ್ರನಾಥ ಠಾಗೋರರ ಸೋದರ ಮೊಮ್ಮಗಳು. ಅವಳ ತಂದೆ ಮನ್ಮಥನಾಥ ಚೌಧರಿ ಮದ್ರಾಸ್ ಪ್ರೆಸಿಡೆನ್ಸಿಯ ಮೊದಲ ಜನರಲ್ ಸರ್ಜನ್ ಆಗಿದ್ದರು. ಮನೆಯಲ್ಲಿ ಹಣಕ್ಕೆ, ಸಿರಿತನಕ್ಕೆ ಯಾವುದೇ ಕೊರತೆ ಇರಲಿಲ್ಲವಾದ್ದರಿಂದ ಒಂಭತ್ತು ವರ್ಷದವಳಾಗಿದ್ದಾಗಲೇ ದೇವಿಕಾ ರಾಣಿಯನ್ನು

ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಕಳಿಸಲಾಯಿತು. ಪ್ರಾಥಮಿಕ ಶಿಕ್ಷಣ ಮುಗಿಸಿದ ದೇವಿಕಾ, ರಾಯಲ್ ಅಕಾಡೆಮಿ ಆಫ್ ಡ್ರಾಮಾಟ್ರಿಕ್ಸ್‌ನಲ್ಲಿ ಅಭಿನಯದ ತರಬೇತಿ ಪಡೆದಳು. ಅಲ್ಲಿ ಅವಳಿಗೆ ಹಿಮಾಂಶು ರಾಯ್ ಪರಿಚಯವಾಯಿತು. ಭಾರತದಲ್ಲಿ ಬ್ಯಾರಿಸ್ಟರ್ ಆಗಿದ್ದ ಹಿಮಾಂಶು ಚಿತ್ರೋದ್ಯಮದ ಕಡೆ ಆಕರ್ಷಿತರಾಗಿದ್ದರು. ತಮ್ಮ ಮೊದಲ ಮೂಕಚಿತ್ರ 'ಎ ಥ್ರೋ ಆಫ್ ಡೈಸ್' ಚಿತ್ರ ನಿರ್ಮಾಣದ ಕುರಿತು ಯೋಚಿಸುತ್ತಿದ್ದರು. ಅದರ ನಿಮಿತ್ತ ಇಂಗ್ಲೆಂಡಿಗೆ ಬಂದಾಗ ಅವರಿಗೆ ದೇವಿಕಾ ರಾಣಿಯ ಪರಿಚಯವಾಯಿತು. ಆಕೆಯ ಅಸಾಧಾರಣ ಕೌಶಲ ಕಂಡು ತನ್ನ ಚಿತ್ರ ನಿರ್ಮಾಣದಲ್ಲಿ ಸಹಕರಿಸುವಂತೆ ಹಿಮಾಂಶು ಕೇಳಿಕೊಂಡರು. ಅದಕ್ಕೆ ಒಪ್ಪಿದ ದೇವಿಕಾ ವಸ್ತ್ರ ವಿನ್ಯಾಸಕಿ ಮತ್ತು ಕಲಾ ನಿರ್ದೇಶಕಳಾಗಿ ಸೇರಿಕೊಂಡಳು. ಚಿತ್ರೀಕರಣ ಮುಗಿಸಿ, ಮುಂದಿನ ಕೆಲಸಕ್ಕೆ ಇಬ್ಬರೂ ಜರ್ಮನಿಗೆ ಹೋದರು. ಅಲ್ಲಿಯ ತಂತ್ರಜ್ಞಾನ ಕಂಡು ಬೆರಗಾದ ದೇವಿಕಾ, ಚಿತ್ರ ನಿರ್ಮಾಣದ ಹೆಚ್ಚಿನ ತರಬೇತಿ ಪಡೆದಳು. ಚಿತ್ರ ಮುಗಿಯುವ ಹೊತ್ತಿಗೆ ದೇವಿಕಾ ಮತ್ತು ಹಿಮಾಂಶು ಪರಸ್ಪರ ಆಕರ್ಷಿತರಾಗಿದ್ದರು. 1929ರಲ್ಲಿ ದೇವಿಕಾ, ವಯಸ್ಸಿನಲ್ಲಿ ತನಗಿಂತ ಹದಿನಾರು ವರ್ಷ ಹಿರಿಯ ಪ್ರಾಯದ ಹಿಮಾಂಶುವನ್ನು ಮದುವೆಯಾದಳು.

ವಿವಾಹದ ನಂತರ ಇಬ್ಬರೂ ಕೆಲಕಾಲ ಜರ್ಮನಿಯಲ್ಲಿ ಉಳಿದರು. ಅಲ್ಲಿ ಜರ್ಮನ್ ಮೋಶನ್ ಪಿಕ್ಚರ್ ಪ್ರೊಡಕ್ಷನ್ ಕಂಪನಿಯಲ್ಲಿ ಕೆಲವು ಖ್ಯಾತ ನಿರ್ದೇಶಕರ ಜೊತೆ ಕೆಲಸ ಮಾಡಿದರು. ಹಿಮಾಂಶು ಆಗಾಗ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಸಂದರ್ಭ ಒದಗಿ ಬಂದಾಗ ದೇವಿಕಾ ಕೂಡ ಹಿಮಾಂಶು ಜತೆ ಅಭಿನಯಿಸುತ್ತಿದ್ದರು. ಅವರಿಬ್ಬರ ಜೋಡಿ ಜರ್ಮನಿಯಲ್ಲಷ್ಟೇ ಅಲ್ಲ, ಯುರೋಪ್‌ನ ಇನ್ನೂ ಕೆಲವು ದೇಶಗಳಲ್ಲಿ ಜನಪ್ರಿಯವಾಯಿತು. ಮದುವೆಯಾಗಿ ನಾಲ್ಕು ವರ್ಷದ ನಂತರ ಇಬ್ಬರೂ ಭಾರತದಲ್ಲಿ ನೆಲೆಸಲು ನಿರ್ಧರಿಸಿದರು. ಹಿಮಾಂಶು ತಮ್ಮ ಮೊದಲ ಟಾಕಿ ಚಿತ್ರದ ಸಿದ್ಧತೆ ನಡೆಸಿದರು. ಇಂಗ್ಲೆಂಡ್ ಮತ್ತು ಜರ್ಮನಿಯ ಮಿತ್ರರೊಂದಿಗೆ ಸೇರಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ನಿರ್ಮಿಸಲಾಗುತ್ತಿದ್ದ ಚಿತ್ರಕ್ಕೆ ಸ್ವತಃ ತಾವೇ ನಾಯಕರಾಗಿ, ದೇವಿಕಾರನ್ನು ನಾಯಕಿಯನ್ನಾಗಿ ಆಯ್ದುಕೊಂಡರು ಹಿಮಾಂಶು. ಕರ್ಮ ಚಿತ್ರ ಬಿಡುಗಡೆಯಾದಾಗ ಇಂಗ್ಲೆಂಡಿನಲ್ಲಷ್ಟೇ ಅಲ್ಲ, ಇತರ ಯುರೋಪ್ ದೇಶಗಳಲ್ಲೂ ಸದ್ದು ಮಾಡಿತು. ರಾತ್ರಿ ಬೆಳಗಾಗುವುದರೊಳಗೆ ದೇವಿಕಾ ಇಂಗ್ಲೆಂಡಿನಲ್ಲಿ ತಾರೆಯಾಗಿದ್ದಳು. ಆ ಚಿತ್ರದಲ್ಲಿ ದೇವಿಕಾ ಒಂದು ಹಾಡನ್ನೂ ಹಾಡಿದ್ದರು. ಇಂಗ್ಲೆಂಡ್‌ನಲ್ಲಿ ಜನಪ್ರಿಯವಾದ ಆ ಹಾಡು, ಭಾರತದ ಚಲನಚಿತ್ರಗಳಲ್ಲೇ ಮೊದಲ ಇಂಗ್ಲೀಷ್ ಹಾಡು ಎಂದು ದಾಖಲಾಯಿತು. ಈ ಚಿತ್ರದಲ್ಲಿ ದೇವಿಕಾ ಮತ್ತು ಹಿಮಾಂಶು ಚುಂಬನದ ದೃಶ್ಯವೂ ಸಾಕಷ್ಟು ಸುದ್ದಿಯಾಯಿತು. ಕರ್ಮ ಚಿತ್ರದ ನಾಲ್ಕು ನಿಮಿಷಗಳ ದೃಶ್ಯ, ಹಿಂದಿ ಚಿತ್ರರಂಗದ ಸುದೀರ್ಘ ಚುಂಬನ ಎಂಬ (ಕು) ಖ್ಯಾತಿಗೂ ಪಾತ್ರವಾಯಿತು. ಬಹುಶಃ ಇದೇ ಕಾರಣವೋ ಏನೋ, ಚಿತ್ರ ಭಾರತದಲ್ಲಿ ನಡೆಯಲೇ ಇಲ್ಲ. ಅಂದು ಭಾರತದ ಪ್ರೇಕ್ಷಕ ಇದನ್ನೆಲ್ಲ ಸ್ವೀಕರಿಸುವ ಮನಸ್ಥಿತಿಯಲ್ಲಿರಲಿಲ್ಲವೋ ಏನೋ, ವಿದೇಶದಲ್ಲಿ ಸೊಲ್ಲೆಬ್ಬಿಸಿದ್ದ ಚಿತ್ರ ಭಾರತದಲ್ಲಿ ಸೋತಿತ್ತು. ಆದರೆ ದೇವಿಕಾ ಗೆದ್ದಿದ್ದಳು. ದೇವಿಕಾ ಕರ್ಮ ಚಿತ್ರದ ತನ್ನ ಅಭಿನಯದಿಂದ ವಿಮರ್ಶಕರ ಮನಗೆದ್ದಿದ್ದಳು. ಎಲ್ಲಿಯವರೆಗೆ ಎಂದರೆ ಅಂದು ಸರೋಜಿನಿ ನಾಯ್ಡು ಕೂಡ ದೇವಿಕಾಳನ್ನು ಸೌಂದರ್ಯ ಮತ್ತು ಪ್ರತಿಭೆಯುಳ್ಳ ಮಹಿಳೆ ಎಂದು ಹೊಗಳಿದರು.

ಯುರೋಪ್‌ನಲ್ಲಿ ಕರ್ಮ ಚಿತ್ರದ ಯಶಸ್ಸಿನ ಉತ್ಸಾಹದಲ್ಲಿದ್ದ ಹಿಮಾಂಶು, ಕೆಲವು ಮಿತ್ರರೊಂದಿಗೆ ಸೇರಿ ಮುಂಬೈಯಲ್ಲಿ ಹದಿನೆಂಟು ಎಕರೆ ಜಮೀನು ಖರೀದಿಸಿ ಬಾಂಬೆ ಟಾಕೀಸ್ ಸಂಸ್ಥೆಯನ್ನು ಹುಟ್ಟು ಹಾಕಿದರು. ಬಾಂಬೆ ಟಾಕೀಸಿನ ಮೊದಲ ಚಿತ್ರ 'ಜವಾನಿ ಕಿ ಹವಾ'ದಲ್ಲಿ ದೇವಿಕಾ ನಾಯಕಿಯಾದರೆ ನಜ್ಮ್-ಉಲ್-ಹಸನ್ ನಾಯಕನಾಗಿದ್ದ. ಒಂದೆಡೆ ಚಿತ್ರದ ಸಂಪೂರ್ಣ ಚಿತ್ರೀಕರಣ ರೈಲಿನಲ್ಲಿ ನಡೆಯುತ್ತಿದ್ದರೆ, ಇನ್ನೊಂದೆಡೆ ದೇವಿಕಾ ಹಸನ್‌ನ ಪ್ರೇಮದ ಕೂಪದಲ್ಲಿ ಇಳಿಯುತ್ತಾ ಹೋದಳು. ಇಬ್ಬರೂ ಜತೆಯಾಗಿ ಎರಡನೆಯ ಚಿತ್ರ 'ಜೀವನ್ನಯ್ಯಾ' ಮುಗಿಸುವುದಕ್ಕಿಂತ ಮೊದಲೇ ಮುಂಬೈ ಬಿಟ್ಟು ಹೋಗಿದ್ದರು. ಅಲ್ಲಿಯವರೆಗೂ ಹಿಮಾಂಶುಗೆ ಅವರಿಬ್ಬರ ನಡುವಿನ ಪ್ರೀತಿಯ ವಿಷಯವೇ ತಿಳಿದಿರಲಿಲ್ಲ. ಚಿತ್ರೀಕರಣಕ್ಕೆ ಸಾಕಷ್ಟು ಹಣ ಖರ್ಚಾಗಿತ್ತು. ಚಿತ್ರ ಮುಗಿಸುವುದು ಅನಿವಾರ್ಯವಾಗಿತ್ತು. ದೇವಿಕಾ ಮತ್ತು ಹಸನ್ ಕೋಲ್ಕತ್ತಾದ ಒಂದು ಹೋಟೇಲಿನಲ್ಲಿ ಉಳಿದುಕೊಂಡಿದ್ದರು. ಮಿತ್ರರ ಮಧ್ಯಸ್ಥಿಕೆಯಿಂದಾಗಿ ದೇವಿಕಾ ಹಿಂತಿರುಗಿ ಮನೆಗೆ ಬಂದಳು. ಆದರೆ ಆರ್ಥಿಕ ಸ್ವಾತಂತ್ರ್ಯವನ್ನು ಬಯಸಿದ್ದಳು. ಹಿಮಾಂಶು ಅದಕ್ಕೆ ಒಪ್ಪಿದ್ದರು. ಆದರೆ, ಒಂದೇ ಸೂರಿನ ಅಡಿಯಲ್ಲಿ ಇರುತ್ತಿದ್ದರೂ ಅವರಿಬ್ಬರ ನಡುವಿನ ಪ್ರೀತಿ ಮಾತ್ರ ಮೊದಲಿನಂತೆ ಸಿಹಿಯಾಗಿರಲಿಲ್ಲ. ಇತ್ತ ಹಿಮಾಂಶು ಹಸನ್‌ನನ್ನು ಬಾಂಬೆ ಟಾಕೀಸ್‌ನಿಂದ ತೆಗೆದು ಹಾಕಿದರು. ಇಲ್ಲಿಂದ ಮುಂದೆ ಹಸನ್‌ಗೆ ಚಿತ್ರರಂಗದಲ್ಲಿ ಅವಕಾಶಗಳೇ ಸಿಗಲಿಲ್ಲ. 'ಜೀವನ್ನಯ್ಯಾ' ಚಿತ್ರದ ಹಸನ್ ಪಾತ್ರಕ್ಕೆ ಬೇರೆ ನಾಯಕ ನಟನ ಶೋಧ ನಡೆಯುತ್ತಿತ್ತು. ಆಗ ಸಿಕ್ಕಿದ್ದೇ ಹಿಂದಿ ಚಿತ್ರರಂಗದ ದಾದಾ ಮೋನಿ, ಅಶೋಕ್

ಕುಮಾರ್. ಮುಂದೆ ಅಶೋಕ್ ಕುಮಾರ್ ಮತ್ತು ದೇವಿಕಾ ರಾಣಿ ಜೋಡಿಯೂ ಹಿಂದಿ ಚಿತ್ರರಂಗದಲ್ಲಿ ಹೆಸರು ಮಾಡಿದ್ದು ಈಗ ಇತಿಹಾಸ.

ಬಾಂಬೆ ಟಾಕೀಸ್ ಸಾಕಷ್ಟು ಚಿತ್ರ ನಿರ್ಮಾಣ ಮಾಡಿ ಅಶೋಕ್ ಕುಮಾರ್, ದಿಲೀಪ್ ಕುಮಾರ್, ರಾಜ್‌ಕಪೂರ್, ಮಧು ಬಾಲಾ, ಮುಮ್ತಾಜ್ ಮೊದಲಾದವರನ್ನು ಚಿತ್ರರಂಗಕ್ಕೆ ಪರಿಚಯಿಸಿತು. 1940ರಲ್ಲಿ ಹಿಮಾಂಶು ರಾಯ್ ನಿಧನರಾದ ನಂತರ ದೇವಿಕಾರಾಣಿ ಬಾಂಬೆ ಟಾಕೀಸ್‌ನ ಉಸ್ತುವಾರಿ ವಹಿಸಿಕೊಂಡು ಅನೇಕ ಚಿತ್ರ ನಿರ್ಮಿಸಿದರು. ಸ್ವಾತಂತ್ರ್ಯ ಪೂರ್ವದಲ್ಲೇ ಬ್ರಿಟಿಷರ ವಿರುದ್ಧ ಹೋರಾಡಿದ ಚಿತ್ರ ನಿರ್ಮಿಸಿ ಸುದ್ದಿ ಮಾಡಿದರು. ಈ ನಡುವೆ ಕೆಲವು ಭಿನ್ನಾಭಿಪ್ರಾಯದಿಂದಾಗಿ ಅಶೋಕ್ ಕುಮಾರ್ ಮತ್ತು ಕೆಲವು ಖ್ಯಾತ ನಟರು ಬಾಂಬೆ ಟಾಕೀಸ್ ಬಿಟ್ಟು ಹೋದರು. 1945ರಲ್ಲಿ ಬಾಂಬೆ ಟಾಕೀಸ್ ಸ್ಥಗಿತಗೊಳಿಸಿದ ದೇವಿಕಾ ರಷ್ಯಾದ ವರ್ಣ ಚಿತ್ರಕಾರ ಸ್ವೆಟೊಸ್ಲಾವ್ರೋರಿಚ್‌ರನ್ನು ಮದುವೆಯಾಗಿ ಮಧುಚಂದ್ರಕ್ಕೆಂದು ಹಿಮಾಲಯದ ತಪ್ಪಲಿಗೆ ಹೋಗಿದ್ದರು. ಆ ಕಾಲದಲ್ಲಿ ಅದೂ ಕೂಡ ದೊಡ್ಡ ಸುದ್ದಿಯಾಗಿತ್ತು. ಕಾರಣ ಆ ಕಾಲದಲ್ಲಿ ಮದುವೆಯಾದವರಲ್ಲಿ ಶೇಕಡಾ ಹತ್ತರಷ್ಟು ಮಾತ್ರ ಮಧುಚಂದ್ರಕ್ಕೆ ಹೋಗುತ್ತಿದ್ದರು. (ಇದು ಆ ಕಾಲದಲ್ಲಿ ಬಾಂಬೆ ವಿಶ್ವವಿದ್ಯಾಲಯದ ಸಮಾಜಶಾಸ್ತ್ರಜ್ಞ ಪ್ರೊ. ಗೋವಿಂದು ಘುಯೆರ್ ನಡೆಸಿದ ಸಮೀಕ್ಷೆಯ ವರದಿ)

ಮದುವೆಯ ನಂತರ ಕೆಲವು ವರ್ಷ ದಂಪತಿಗಳು ಮನಾಲಿಯಲ್ಲಿ ಉಳಿದರು. ಕ್ರಮೇಣ ಬೆಂಗಳೂರಿನ ಬಳಿ ನಾಲ್ಕು ನೂರ ಐವತ್ತು ಎಕರೆಯ ಎಸ್ಟೇಟ್ ಖರೀದಿಸಿ, ಸಿನಿಮಾ ಪ್ರಪಂಚದಿಂದ ದೂರ ಉಳಿದರು. 1993ರಲ್ಲಿ ರೋರಿಚ್ ನಿಧನರಾದರು. ಅದಾಗಿ ಒಂದೇ ವರ್ಷದಲ್ಲಿ ದೇವಿಕಾ ಕೂಡ ಕೊನೆಯುಸಿರೆಳೆದಳು. ದೇವಿಕಾಗೆ ಸಂತಾನವಿರಲಿಲ್ಲವಾದ್ದರಿಂದ ಕೆಲವು ವರ್ಷಗಳ ನಂತರ ಆಕೆಯ ಎಸ್ಟೇಟ್ ಅನ್ನು ಕರ್ನಾಟಕ ಸರಕಾರ ತನ್ನ ಸ್ವಾಧೀನಕ್ಕೆ ಒಳಪಡಿಸಿಕೊಂಡಿತು.

ದೇವಿಕಾ ರಾಣಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ. ಸಿನಿಮಾರಂಗದಲ್ಲಿ ಸಲ್ಲಿಸಿದ ಸೇವೆಗೆ ನೀಡುವ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಮೊದಲು ಪಡೆದ ಶ್ರೇಯವೂ ದೇವಿಕಾ ರಾಣಿಗೆ ಸಲ್ಲುತ್ತದೆ. 2011ರಲ್ಲಿ ಭಾರತ ಸರಕಾರ ಆಕೆಯನ್ನು ಭಾರತದ ಚಿತ್ರರಂಗದ ಪ್ರಥಮ ಮಹಿಳೆ ಎಂಬ ಗೌರವ ನೀಡಿ ಅಂಚೆಚೀಟಿಯನ್ನೂ ಬಿಡುಗಡೆ ಮಾಡಿದೆ.

ದೇವಿಕಾ ಪಯಣ ಹಲವಾರು ತಿರುವುಗಳಲ್ಲಿ ತಿರುಗಿದೆ. ಇಳಿಮೋರೆಯಲ್ಲಿ ಇಳಿದಿದೆ. ಏರನ್ನೂ ಹತ್ತಿದೆ. ಏನೇ ಆದರೂ ಭಾರತೀಯ ಚಿತ್ರರಂಗವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕರೆದೊಯ್ಯುವಲ್ಲಿ ದೇವಿಕಾ ರಾಣಿಯ ಪಾತ್ರವೂ ಇದೆ. ಸುಮಾರು ಒಂಬತ್ತು ದಶಕದ ಹಿಂದೆಯೇ ಮಹಿಳಾ ಸಬಲೀಕರಣಕ್ಕೆ ಉತ್ತಮ ಉದಾಹರಣೆ ದೇವಿಕಾ ರಾಣಿ.

ದೇವಿಕಾ ರಾಣಿಯ ಜೀವನದ ಇನ್ನಷ್ಟು ಕುತೂಹಲಕಾರಿ ಘಟನೆಗಳನ್ನು ಕಿಶ್ವರ್ ದೇಸಾಯಿ ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಚಲನಚಿತ್ರಾಸಕ್ತರು ಓದಬಹುದಾದ ಒಂದು ಉತ್ತಮ ಕೃತಿ - ದಿ ಲಾಂಗೆಸ್ಟ್ ಕಿಸ್. ○

**ಕವನ**

## ಸ್ತ್ರೀ

**– ಸವಿತಾ ಎಸ್. ಶೆಟ್ಟಿ**



ಮನೆ ಮನವ ಬೆಳಗುವವಳು
ಮನೆ ಮಂದಿಗೆ ಬೇಕಾದವಳು
ಪಟ್ಟು ಹಿಡಿದು ಮುನ್ನಡೆವವಳು
ತನ್ನತನವನ್ನು ಸದಾ ಮರೆವವಳು

ನವಮಾಸ ಹೊತ್ತು ಸಾಕಿದವಳು
ಕಷ್ಟಗಳನ್ನು ಉಂಡು ಸೈರಿಸಿಕೊಂಡವಳು
ಬೇಕು ಬೇಡಗಳನ್ನು ಪರೀಕ್ಷಿಸುವವಳು
ಏರಿಳಿತದಲ್ಲೂ ಸಹನೆ ಬಿಡದವಳು

ರೂಪ ಸೌಂದರ್ಯಕೆ ಹೆಸರಾದವಳು
ಬಿಂಕ ಬಿನ್ನಾಣದ ನಡಿಗೆಯವಳು
ಸುಖ ದುಃಖದಲಿ ಭಾಗಿಯಾಗುವವಳು
ಸರ್ವತ್ರ ಮಿಂಚಂತೆ ಮಿನುಗುವವಳು

ಹೆಣ್ಣಾಗಿ ಹಲವು ಅಭಿದಾನಗಳಿಗೆ ಒಪ್ಪುವವಳು
ಪ್ರೀತಿ ಒಲುಮೆಯ ಆಗರವಾಗಿಹಳು
ಸಂಸಾರದ ನೊಗಕ್ಕೆ ಹೆಗಲು ಕೊಡುವವಳು
ಅಮ್ಮನೆಂಬ ಪ್ರೀತಿಗೆ ಪಾತ್ರಳಾದವಳು.

○○○

With
Best Compliments
From :

Chandrahas Shetty (CEO)

**Skytech**
**Systems (India) Pvt. Ltd.**
**&**
**BHARTI ENTERPRISE**

*401, Siddeshwar Arcade, Opp. Suraj Water Park,*
*Ghodbunder Road, Thane (W) - 400 607.*

*Tel. : 022-2597 5110*
*Fax : 022-2597 5116*

*E-mail : shetty@skytechindia.com*
*Website : www.skytechindia.com*

Best Wishes From :
Sunil Alva

UNIQUE
EXPRESS

UNIQUE
AIR FREIGHT
EXPRESS
& LOGISTICS PVT. LTD.

2/A, Planet Industrial Estate,
Opp. United Ink, Subhas Road,
Vile Parle (E), Mumbai - 400 057.

Tel : 022-4228 5850/6694 1984
Fax : 022 - 4228 5888
E-mail : customercare@uniqueairfreight.com
BHIWANDI : 97690 11162

A name to remembered for Best,
Tasty & Delicious Food

ಶುಚಿ
ರುಚಿಗೆ
ಹೆಸರಾದ
ಮುಂಬಯಿಯ

# Laxmi CATERERS

SERVICE WITH SMILE



# ಲಕ್ಷ್ಮೀ ಕೇಟರರ್ಸ್

**South Indian, Punjabi & Chinese Dishes,
All types of Catering service available
for all occasion.**

**We are the official caterers of :**

- **Buntara Bhavana - Kurla**
- **Manav Seva Sangha - Sion**
- **Vallabh Sangeet Vidyalaya - Sion**
- **Chedda Ngr. Gymkhana - Chembur**
- **S.M. Shetty High School - Powai**

We undertake Outdoor Catering All over Mumbai Assistance
in Hall Booking & Allied Matter

SPECIAL DISCOUNT FOR KANNADIGAS

*For Booking Contact* : **SATISH R. SHETTY**
Vallabh Sangeet Vidyalaya (Next to Swami Nityanand Hall),
Ground Floor, Plot No. 6, Road No. 24, Sion (W),
Mumbai - 400 022.
**✆ Off. : 2403 5191 • Mobile : 98211 80002 / 98211 84002**

*Advt.*

## ಥಾಣೆ ಬಂಟ್ಸ್ ವೈವಾಹಿಕ ಕೇಂದ್ರ



ಸಮಾಜಮುಖಿ ಕಾರ್ಯಗಳಿಗೆ ಸದಾ ಪ್ರಚೋದನೆ ಕೊಡುವ ಥಾಣೆ ಬಂಟ್ಸ್ ಎಸೋಸಿಯೇಶನ್ ಸಮಾಜಬಾಂಧವರಿಗೆ ವೈವಾಹಿಕ ಹೊಂದಾಣಿಕೆ ಮಾಡಿಕೊಳ್ಳಲು ಆಗುತ್ತಿರುವ ತೊಂದರೆಗಳನ್ನು ಮನಗಂಡು ಕಳೆದ ಕೆಲವು ವರ್ಷಗಳಿಂದ ವೈವಾಹಿಕ ಹೊಂದಾಣಿಕೆ ಕೇಂದ್ರವನ್ನು ನಡೆಸುತ್ತಿದೆ. ಸದಸ್ಯ ಬಾಂಧವರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು.

**ಗೀತಾ ವಸಂತ್ ಶೆಟ್ಟಿ**, ಕಾರ್ಯಾಧ್ಯಕ್ಷರು ಮ್ಯಾರೇಜ್ ಸೆಲ್

**Ph. : 90295 78156**

## ಸದಸ್ಯರ ಗಮನಕ್ಕೆ

ಥಾಣೆ ಬಂಟ್ಸ್ ಎಸೋಸಿಯೇಶನ್ ಮುಖವಾಣಿ ಸ್ನೇಹ ಸೌರಭ ಸಂಘದ ಚಟುವಟಿಕೆಗಳನ್ನು ಸದಸ್ಯರ ಮನೆಬಾಗಿಲಿಗೆ ತಲುಪಿಸುವ ಪ್ರಯತ್ನ. ಇದು ಪ್ರತಿಯೋರ್ವ ಸದಸ್ಯನ ಪತ್ರಿಕೆ. ಇದನ್ನು ಪೋಷಿಸುವುದು, ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ಪತ್ರಿಕೆಯ ಸದಸ್ಯನಾಗಿಯೂ, ಜಾಹೀರಾತು ನೀಡಿಯೂ ತಾವು ಸಹಕರಿಸುವಿರೆಂಬ ನಂಬಿಕೆ ನಮಗಿದೆ.

ಸದಸ್ಯರ ಮನೆಯಲ್ಲಿ ಏರ್ಪಡುವ ಮದುವೆ, ನಿಶ್ಚಿತಾರ್ಥ, ಪೂಜೆ-ಪುರಸ್ಕಾರ ಮುಂತಾದ ಶುಭ ಕಾರ್ಯಗಳ ವಿವರಗಳನ್ನು ಸಂಘಕ್ಕೆ ಕಳುಹಿಸಿ, ಅಲ್ಲದೆ ಆತ್ಮೀಯರು ತೀರಿಕೊಂಡಾಗ ಉತ್ತರಕ್ರಿಯೆಯ ವಿವರಗಳನ್ನು ಕಳುಹಿಸಿಕೊಟ್ಟಲ್ಲಿ ಅದನ್ನು ಪ್ರಕಟಿಸುತ್ತೇವೆ. ಆಫೀಸಿನಲ್ಲಿ ನೀವು ನಿಮ್ಮ ಮಕ್ಕಳು ಬಡ್ತಿ, ಕ್ರೀಡಾರಂಗದಲ್ಲಿ ಯಶಸ್ಸು, ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದವರ ವರದಿಗಳನ್ನು ಕಳುಹಿಸಿಕೊಟ್ಟಲ್ಲಿ ಪ್ರಕಟಿಸಲಾಗುವುದು.

ಕಥೆ-ಕವನ, ನಗೆಹನಿ, ವ್ಯಕ್ತಿಪರಿಚಯ, ವಿಮರ್ಶೆ, ವೈಚಾರಿಕ ಲೇಖನ ಕಳುಹಿಸಿಕೊಡಿ. ಪ್ರಕಟಣೆಗೆ ಅರ್ಹವಿದ್ದರೆ ಪ್ರಕಟಿಸುತ್ತೇವೆ. ನಮ್ಮ ನಿಮ್ಮ ಸೃಜನಶೀಲತೆಯ ಪ್ರತಿಬಿಂಬವೇ ಈ "ಸ್ನೇಹ ಸೌರಭ."

**ಸಂಪಾದಕರು**

# 'ಸ್ನೇಹ ಸೌರಭ'ದ ಸದಸ್ಯರಾಗಿ, ಸ್ನೇಹ ಸೌರಭದಲ್ಲಿ ಜಾಹೀರಾತು ನೀಡಿ ನಮ್ಮೊಡನೆ ಸಹಕರಿಸುವಿರಾ...

'ಸ್ನೇಹ ಸೌರಭ' ನಮ್ಮ ಎಸೋಸಿಯೇಶನ್‌ನ ಮುಖವಾಣಿ; ಬಂಟ ಬಾಂಧವರ ನಡುವಿನ ಸ್ನೇಹ ಸೇತುವೆ; ನಮ್ಮ ನಿಮ್ಮೆಲ್ಲರ ನೆಚ್ಚಿನ ಪತ್ರಿಕೆ! ಈ ಪತ್ರಿಕೆಗೆ ಜಾಹೀರಾತು ನೀಡುವುದರ ಮೂಲಕ, ಪತ್ರಿಕೆಯ ಚಂದಾದಾರರಾಗುವ ಮೂಲಕ ಇಂದು ಅಂಕುರಿಸಿರುವ ಪತ್ರಿಕೆಗೆ ಪ್ರೋತ್ಸಾಹದ ನೀರೆರೆಯಿರಿ; ಈ ಅಂಕುರ ಗಿಡವಾಗಿ, ಮರವಾಗಿ ಬೆಳೆದು 'ಸ್ನೇಹ' ಹೂ ಬಿಟ್ಟು ತನ್ನ 'ಸೌರಭ'ವನ್ನು ಎಲ್ಲೆಡೆಗೆ ಹರಡಲು ಸಹಕರಿಸಿರಿ.

## "SNEHA SAURABHA" ADVERTISEMENT TARRIFF

| | Per Year | 2 Years |
|---|---|---|
| Back Cover Page | Rs. 24,000/- | Rs. 43,000/- |
| Cover Inside Page (Front / Back) | Rs. 20,000/- | Rs. 36,000/- |
| Inside Colour Page | Rs. 18,000/- | Rs. 32,250/- |
| Full Page | Rs. 12,000/- | Rs. 21,500/- |
| Half Page | Rs. 9,000/- | Rs. 16,200/- |

## "SNEHA SAURABHA" MEMBERSHIP

| | |
|---|---|
| Life Member | Rs. 500/- |
| Patron | Rs. 1,500/- |
| Grand Patron | Rs. 2,500/- |

## ಥಾಣೆ ಬಂಟ್ಸ್ ಎಸೋಸಿಯೇಶನ್ ಸದಸ್ಯರಾಗಿ ಸಂಸ್ಥೆಯನ್ನು ಬೆಳೆಸಿರಿ
## THANE BUNTS ASSOCIATION

| | | |
|---|---|---|
| Grand Patron | Rs. 5,000/- | (For Couple / Individual) |
| Patron Member | Rs. 2,500/- | (For Couple / Individual) |
| Paramount Member | Rs. 1,000/- | (For Couple / Individual) |
| Life Member | Rs. 500/- | (For Couple / Individual) |

## ವಿಳಾಸ ಬದಲಾದ ಸದಸ್ಯ ಬಾಂಧವರಲ್ಲಿ ವಿನಂತಿ.

ಪ್ರತಿಯೊಬ್ಬ ಸದಸ್ಯನೂ ತನ್ನ ವಿಳಾಸ ಬದಲಾದ ಕೂಡಲೇ ಅದನ್ನು 'ಥಾಣೆ ಬಂಟ್ಸ್'ನ ಕಛೇರಿಗೆ ತಿಳಿಸಬೇಕು. ನಮ್ಮ ನಿಮ್ಮ ಸಂಪರ್ಕ ಕೇವಲ ಪತ್ರಮುಖೇನ ಅಥವಾ ದೂರಧ್ವನಿ ಮೂಲಕ ಮಾತ್ರ ಸಾಧ್ಯ ಎಂಬುದು ತಮಗೂ ಗೊತ್ತು. ನೀವು ನಿಮ್ಮ ಸರಿಯಾದ ವಿಳಾಸ ಮತ್ತು ಸರಿಯಾದ ದೂರಧ್ವನಿ ಕ್ರಮಾಂಕವನ್ನು ನೀಡದಿದ್ದರೆ ನಿಮ್ಮನ್ನು ಸಂಪರ್ಕಿಸುವುದು ಅಸಾಧ್ಯ. ಪ್ರತಿಸಲ ವಿಳಾಸ ಬದಲಾದ ಕಾರಣ ಅಥವಾ ವಿಳಾಸ ಸರಿಯಿಲ್ಲದ ಕಾರಣ ಕೊರಿಯರ್‌ನಲ್ಲಿ ಕಳುಹಿಸಿದ ನೂರಕ್ಕಿಂತಲೂ ಹೆಚ್ಚು ಪತ್ರಗಳು ಹಿಂದೆ ಬರುತ್ತವೆ. ಇದರಿಂದ ತಮಗೆ ಹಾನಿ; ಸಂಸ್ಥೆಗೂ ಅನಗತ್ಯ ಖರ್ಚು. ಆದುದರಿಂದ ದಯವಿಟ್ಟು ನಿಮ್ಮ ಹಾಗೂ ಸಂಸ್ಥೆಯ ಹಿತವನ್ನು ಗಮನದಲ್ಲಿರಿಸಿ ನಿಮ್ಮ ಸರಿಯಾದ ವಿಳಾಸವನ್ನು ಸಂಘದ ಕಛೇರಿಗೆ ತಿಳಿಸಿರಿ ಅಥವಾ ಕಛೇರಿಯ ಈ ದೂರಧ್ವನಿ ಕ್ರಮಾಂಕದಲ್ಲಿ ಸಂಪರ್ಕಿಸಿರಿ.

# ಥಾಣೆ ಬಂಟ್ಸ್ ಎಸೋಸಿಯೇಶನ್
# THANE BUNTS ASSOCIATION

101, ಜೈಶಂಕರ್ ಕೋ.ಆಪ. ಹೌಸಿಂಗ್ ಸೊಸೈಟಿ ಲಿ. ಆಕ್ಸಿಸ್ ಬ್ಯಾಂಕಿನ ಎದುರು,
ಎಲ್.ಬಿ.ಎಸ್. ಮಾರ್ಗ, ಹರಿನಿವಾಸ, ಥಾಣೆ (ಪ)
ಮೊಬೈಲ್ : 7506371586
e-mail : thanebunts@gmail.com / web : www.thanebunts.org

## 'ಸ್ನೇಹ ಸೌರಭ' ದ ಪತ್ರಿಕೆಯ ಸದಸ್ಯತ್ವದ ಅರ್ಜಿ

'ಸ್ನೇಹ ಸೌರಭ' ನಮ್ಮ ಎಸೋಸಿಯೇಶನ್‌ನ ಮುಖವಾಣಿ; ಬಂಟ ಬಾಂಧವರ ನಡುವಿನ ಸ್ನೇಹ ಸೇತುವೆ; ನಮ್ಮ ನಿಮ್ಮೆಲ್ಲರ ನೆಚ್ಚಿನ ತ್ರೈಮಾಸಿಕ ಪತ್ರಿಕೆ! ಪತ್ರಿಕೆಯ ಚಂದಾದಾರರಾಗಿ ಇಂದು ಅಂಕುರಿಸಿರುವ ಪತ್ರಿಕೆಗೆ ಪ್ರೋತ್ಸಾಹದ ನೀರೆರೆಯಿರಿ; ಈ ಅಂಕುರ ಗಿಡವಾಗಿ, ಮರವಾಗಿ ಬೆಳೆದು 'ಸ್ನೇಹ' ದ ಹೂ ಬಿಟ್ಟು ತನ್ನ 'ಸೌರಭ' ವನ್ನು ಎಲ್ಲೆಡೆಗೆ ಹರಡಿಸಲಿ.

| | | |
|---|---|---|
| **ಅಶೋಕ್ ಎಮ್. ಶೆಟ್ಟಿ** | **ಸುರೇಶ್ ಶೆಟ್ಟಿ, ಕಡಂದಲೆ** | **ಡಾ. ಕರುಣಾಕರ್ ಶೆಟ್ಟಿ, ಪಣಿಯೂರು** |
| ಅಧ್ಯಕ್ಷರು | ಕಾರ್ಯಾಧ್ಯಕ್ಷರು | ಪ್ರಧಾನ ಸಂಪಾದಕರು |

ಹೆಸರು : ..........................................................................................

ವಿಳಾಸ : ..........................................................................................

..........................................................................................

ಫೋನ್ (ಮೊಬೈಲ್) : ..........................................................................................

ಲ್ಯಾಂಡ್‌ಲೈನ್ : ..........................................................................................

ಇ-ಮೇಲ್ : ..........................................................................................

ಸದಸ್ಯತ್ವ : ಮಹಾಪೋಷಕ ರೂ. 2500, ಪೋಷಕ ರೂ 1500,
ಆಜೀವ ಸದಸ್ಯ ರೂ. 500

ಸದಸ್ಯತ್ವ ನೋಂದಾಯಿಸಿ
ದವರ ಹೆಸರು : ..........................................................................................

**ವಿಳಾಸ ಬದಲಾದ ಸದಸ್ಯ ಬಾಂಧವರಲ್ಲಿ ವಿನಂತಿ.**

ಪ್ರತಿಯೊಬ್ಬ ಸದಸ್ಯನೂ ವಿಳಾಸ ಬದಲಾದ ಕೂಡಲೇ ಅದನ್ನು 'ಥಾಣೆ ಬಂಟ್ಸ್' ನ ಕಛೇರಿಗೆ ತಿಳಿಸಬೇಕು.

*With Best Compliments From :*

# Li-Vans

## MEN'S WEAR

Customized Tailoring For Men And Women
Suits ,Trousers , Shirts And Ethnic wear
We are also stockiest of leading brands Like
Raymond , Siyaram's , ARVIND , Reid & Taylor, Linen
And also Imported Fabrics

**Contact Mr. Vinay Shetty 9821187799**

---

Ashwamedh Apts., Ram Maruti Cross Road,
Naupada, Thane - 400 602. **Phone : 2540 8356**

# eka
## dental care

ನಾವು ಉನ್ನತ ಗುಣಮಟ್ಟದ
ದಂತ ಆರ್ಯಕೆಯನ್ನು ಅತ್ಯಂತ
ಕೈಗೆಟುಕುವ ಶುಲ್ಕದಲ್ಲಿ ಒದಗಿಸುತ್ತೇವೆ

**60% less fees**
compared to standard fees.

**MONDAY TO SATURDAY**
**9am to 10pm**

SUNDAYS
**9am to 1pm**

Cleaning Rs.450
Root Canal Rs. 1,650
Implants Rs. 15,400
Ceramic Crown (cap) Rs.2,800
Metal Braces Rs.16,000
Metal Cap 1,000
Dentures Rs. 8,800

Scan QR code to view all treatment prices.

**FREE CONSULTATION! 744 93 744 63**

M.G.Road, Mulund (W) · Pant Nagar, Ghatkopar (E) · Anand Nagar, Thane (W) · Naupada, Thane (W)












**A Multicuisine Restaurant | Indian | Chinese | Continental**
**Vegetarian | Non Vegetarian Dishes**

**Banquet Hall Available (Palm Court / Flurries / Z+ (Function Hall)**
**Capacity of 50 to 500 Guest | Free Wifi | Free Parking**

VIHANG'S INN

Opp. Cine Wonder Mall, Next to Vijay Sales, Ghodbunder Road, Thane (West) 400 607.
Contact : +91 22 5842030 / 41124110 / 41124111 / 41124112.
Email: Vihangkuberhospitality@yahoo.com Web Site : http://www.vihangshinn.co.in

If undelivered
please return to :

THANE BUNTS ASSOCIATION
101, Jai Shankar CHS Ltd.,
Opp. Axis Bank, LBS Marg,
Hari Niwas, Thane (W) - 400602.

DESIGNED & PRINTED AT : NAVIN PRINTERS, MUMBAI - 16 PH.: 98332 15105 / 98923 21121 E-mail: nvnprint@gmail.com